ಮುದ್ರಕರು.
ಎಲ್. ಆಯ್. ಆಕಳವಾಡಿ
ಬಿ. ಎ., ಬಿ. ಕಾಮ್
ಮನೋಹರ ಮುದ್ರಣಾಲಯ,
ಮಂಗಳವಾರಪೇಟ : ಧಾರವಾಡ

ಬೆಲೆ ರೂ: 0.45

ಪ್ರಕಾಶಕರು:
ಆಯ್. ಆರ್. ಆಕಳವಾಡಿ ಅ್ಯಂಡ ಸನ್ಸ
ರಾಮಾಶ್ರಯ ಬುಕ್ ಡಿಪೊ,
ಸುಭಾಸರೋಡ: ಧಾರವಾಡ

ಒ ಡೆ ಪು

ಸಂಸ್ಕೃತ ಭಾಷೆ ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಅಗ್ರಪಟ್ಟವನ್ನು ಪಡೆದಿದೆ. ಈ ಮಾತಿಗೆ ಬೆಂಬಲವಾಗಿ ಅನೇಕ ಕಾರಣಗಳಿವೆ: ಸಂಸ್ಕೃತ ಭಾಷೆ– ೧. ಅತ್ಯಂತ ಪ್ರಾಚೀನತಮವಾಗಿದೆ; ೨. ದ್ರಾವಿಡ ಮತ್ತು ಕೆಲವು ಗಿರಿಜನ ಭಾಷೆಗಳನ್ನು ಉಳಿದು ದೇಶ–ವಿದೇಶಗಳ ಮುಖ್ಯಾಲುವಾಸಿ ಭಾಷೆಗಳಿಗೆ ಮಾತೃ ಸ್ಥಾನದಲ್ಲಿದೆ; ೩. ದ್ರಾವಿಡ ಭಾಷಾ ಸಂತತಿಗೆ ಕೂಡ 'ಸಾಕುತಾಯಿ' ಯಾಗಿ ನಿಂತಿದೆ; ಆ ಸಂತತಿಯ ಸಂವರ್ಧನೆ ಗಾಗಿ ತನ್ನ ಅತುಲ ಸಂಪತ್ತನ್ನು ನೀಡಿದೆ. ೪. ಮಾನವ ಜೀವಿತದ ಹಿರಿಯ ಗುರಿ ಎನಿಸುವ ಮತ್ತು ಇಹ–ಪರ ಸೌಖ್ಯಗಳನ್ನು ಏಕೀಕರಿಸುವ ಅಧ್ಯಾತ್ಮವಾದದ ವೇದಾದಿ ವಾಙ್ಮಯಗಳಿಗೆ ಆರು ಸಾವಿರ ವರುಷಗಳ ಕೆಳಗೇ ಜನ್ಮ ಕೊಟ್ಟಿದೆ. ೫. ಜಾಗತಿಕ ಮಹಾಕವಿಗಳೆನಿಸಿದ ಭಾಸ, ಕಾಳಿದಾಸ, ಭವಭೂತಿ, ದಂಡಿ ಮುಂತಾದವರನ್ನು ಸಾಹಿತ್ಯ ಸಾಮ್ರಾಜ್ಯ ಸಿಂಹಾಸನದ ಮೇಲೆ ಕುಳ್ಳಿರಿಸಿದೆ. ೬. ಮೇಣದಂತೆ ಮಿದು ವಾಗಿದ್ದು, ಅರ್ಥ ಗಾಂಭೀರ್ಯ ಶಬ್ದ ಸೌಷ್ಠವಗಳ ಬಲದಿಂದ ಯಾವುದೇ ವಿಚಾರವನ್ನು ಸಮರ್ಥಿಸಬಲ್ಲ ಶಕ್ತಿಯನ್ನು ಒಳಗೊಂಡಿದೆ. ೬. ಆಧ್ಯಾತ್ಮಿಕ ವಾಙ್ಮಯದಂತೆ, ವೈದ್ಯ, ಶಿಲ್ಪ, ವಿಜ್ಞಾನ, ಜ್ಯೋತಿಷ, ಗಣಿತ ಮುಂತಾದ ಭೌತಿಕ ಶಾಸ್ತ್ರಗಳ ಮಹಾ ಗ್ರಂಥ ಗಳನ್ನೂ ಒದಗಿಸಿದೆ. ೭. ಕಲಾವಿಲಾಸದ ಅಂಗಗಳಾದ ನೃತ್ಯ, ಸಂಗೀತ, ಚಿತ್ರಕಲೆ, ನಾಟಕ ಮೊದಲಾದ ಲಲಿತ–ಸಾಹಿತ್ಯಗಳಿಂದ ಓತಪ್ರೋತವಾಗಿ ತುಂಬಿಕೊಂಡಿದೆ. ೮. ರಸಾಲಂಕಾರ ಪರಿಪೋಷಣೆಗಂತೂ ಏಕಮೇವಾದ್ವಿತೀಯವಾಗಿ ಮೆರೆಯುತ್ತಿದೆ. ೯. ಸಂಸ್ಕೃತಿ ನಾಗರಿಕತೆಗಳ ಸುಂದರ ಸಮನ್ವಯವಾಗಿದೆ. ೧೦. ವಿಶ್ವದ ವಿವಿಧ ಭಾಷೆ ಗಳ ಅಭ್ಯಾಸಕ್ಕೆ ಮಿಗಿಲಾದ ಮಾಧ್ಯಮವೆನಿಸಿದೆ. ....

ಸಂಸ್ಕೃತ ಭಾಷೆಯ ಶ್ರೇಷ್ಠತೆಯ ಬಗೆಗೆ ಇನ್ನೂ ಕೆಲವು ಕಾರಣಗಳನ್ನು ಕೊಡ ಬಹುದು. ಎಂತೆಯೇ ಇದನ್ನು ದೇವವಾಣಿ, ಆರ್ಷವಾಣಿ, ಗೀರ್ವಾಣವಾಣಿ ಮುಂತಾಗಿ ಪವಿತ್ರ ನಾಮಗಳಿಂದ ಗೌರವಿಸಲಾಗಿದೆ. ಇಂತಹ ಚಿರನೂತನ ಭಾಷೆಯನ್ನು 'ಮೃತ ಭಾಷೆ' (Dead language) ಎಂದು ಕರೆಯುವುದು, ಗುಣವನ್ನು ಅಗೌರವಿಸಿ ದಂತೆ; ಅದಕ್ಕಿಂತಲೂ ಅಧಿಕವಾಗಿ ನಮ್ಮ ಮೂರ್ಖತನದ ಮೆರವಣಿಗೆಯನ್ನು ಮಾಡಿ ಕೊಂಡಂತೆ ! ಸಂಸ್ಕೃತ ಭಾಷೆಯ ಮಹತ್ತ್ವ ಕಡಮೆಯಾದಂತೆ, ಭಾರತೀಯ ನಾಗರಿ ಕತೆ, ಸುಸಂಸ್ಕೃತಿಗಳ ಮಟ್ಟವೂ ಕೆಳಗೆ ಇಳಿಯುಹತ್ತಿದೆ ಎಂಬುದು ವಿಚಾರವಂತರಿಗೆ ಹೊಳೆಯದಿರದು.

ಹೀಗೆ ಹೇಳಿದ ಮಾತ್ರಕ್ಕೆ, ಅನ್ಯಭಾಷೆಗಳು ಅಸಂಸ್ಕೃತ, ಅಪರಿಪೂರ್ಣ ಎಂದು ಹೇಳುವ ಉದ್ದೇಶ ನಮ್ಮದಲ್ಲ. ದ್ರಾವಿಡ ಭಾಷೆಯಲ್ಲಿ ಆಧ್ಯಾತ್ಮಿಕ – ಭೌತಿಕ ಮಹಾ ಶಾಸ್ತ್ರಗಳಿಲ್ಲವೆ ? ಲಲಿತ ಸಾಹಿತ್ಯ ಸಮೃದ್ಧಿಯಿಲ್ಲವೇ ? ಎಂದು ಕೇಳುವವರೂ ಉಂಟು. ಅವರ ಆಕಾಂಕ್ಷೆಗೆ ಆನಂದದಿಂದ ಸಮ್ಮತಿಯನ್ನು ಸೂಚಿಸುತ್ತೇವೆ. ಆದರೆ, ಅದೇ ಪ್ರಸಂಗದಲ್ಲಿ, ಅನ್ಯಭಾಷಾ ಸಂಪ್ರದಾಯದ ಮಹಾನುಭಾವರು ಮೊತ್ತಮೊದ ಲಿಗೆ ಸಂಸ್ಕೃತ ಸಾಹಿತ್ಯಗಳನ್ನು ಆಳವಾಗಿ ಅಭ್ಯಸಿಸಿದ್ದರೆಂಬುದನ್ನೂ ಆದರ ಬಲ

ದಿಂದಲೇ ವಾಙ್ಮಯ ಸಾಹಿತ್ಯ–ಸೃಷ್ಟಿಗಳ ಸ್ಫೂರ್ತಿಯನ್ನು ಪಡೆದರೆಂಬುದನ್ನೂ ಹೇಳ ಬಯಸುತ್ತೇವೆ. ಮುಂದೆ ಕಾಲಮಾನಕ್ಕೆ ತಕ್ಕಂತೆ ಹೊಸ ಹೊಸ ವಿಚಾರ–ವಿಧಾನ ಗಳನ್ನು ತಮ್ಮ ಕೃತಿಗಳಲ್ಲಿ ಸೇರಿಸಿರಬಹುದು. ಬದಲಾಗುತ್ತಿರುವ ಜಗತ್ತಿನಲ್ಲಿ ಇದು ಸಹಜ ಸತ್ಯವೇ ಎನ್ನೋಣ. ಎಂದ ಮಾತ್ರಕ್ಕೆ, ಆರಂಭದಲ್ಲಿ ಅವರು ಪಡೆದ ಸಂಸ್ಕೃತ ಭಾಷಾ ಪರಿಣತಿಯ ಋಣವನ್ನು ಮರೆಯುವಂತಿಲ್ಲ.

ಇಂತಹ ಅಮೌಲ್ಯ ಸಂಸ್ಕೃತ ಭಾಷೆ ಇಂದು– ದೇಶವಿದೇಶಗಳ ಮಾತು ಹಾಗಿ ರಲಿ– ಭಾರತದಲ್ಲಿಯೇ ಅನವಸ್ಥೆ ದುರವಸ್ಥೆಗಳಿಗೆ ಈಡಾಗಿದೆ. ಇದರಿಂದ ಭಾರ ತೀಯ ಜನಜೀವನದ ಪ್ರಗತಿಗೆ ಬಹುಮುಖವಾದ ಬರಡುತನ ಬಂದಿದೆ ಎಂದು ಆಧು ನಿಕ ಜನನಾಯಕರು ಕಂಡು ಕೊಂಡಿದ್ದಾರೆ. ಅದಕ್ಕಾಗಿಯೇ, ಸಂಸ್ಕೃತ ಭಾಷೆಯ ಪುನರುಜ್ಜೀವನ ಪುನಾರಚನೆಗಳ ಸಲುವಾಗಿ ದೇಶದಾದ್ಯಂತ ಬಗೆಬಗೆಯ ಚಟುವಟಿಕೆ ಗಳನ್ನು ಆರಂಭಿಸಿದ್ದಾರೆ. ಅವರ ಮಹಾಸೇತು ಬಂಧನ ಕಾರ್ಯದಲ್ಲಿ ನಮ್ಮ 'ಸಂಸ್ಕೃತ ಸಾಹಿತ್ಯ ಸುಧಾ' ಪುಸ್ತಕಮಾಲೆ 'ಅಳಿಲುಸೇವೆ'.

ಮೂರು ವರುಷಗಳ ಬುದ್ಧಿ ನೂರು ವರುಷಗಳ ವರೆಗೆ— ಎಂದು ಕನ್ನಡದಲ್ಲಿ ನಾಣ್ನುಡಿ. ಎಳೆಯ ಗಿಡದ ಮೇಲೆ ಕೆತ್ತಿದ ಅಕ್ಷರಗಳು, ಗಿಡದ ಬಳಮೆಯೊಡನೆ ಬೆಳೆ ಯುತ್ತಲೇ ಹೋಗುತ್ತಿವೆ, ಎಂಬುದು ಅನುಭವ ವೇದ್ಯ. ಈ ಕಾರಣದಿಂದ ಪ್ರಾಥ ಮಿಕ ಶಾಲೆಯ ಮಕ್ಕಳಿಂದ ಹಿಡಿದು ಅಕ್ಕರಿಗರಾದ ಮುಪ್ಪಿನವರ ವರೆಗೂ ಓದಲು ಅನುಕೂಲವಾಗುವಂತೆ, ತಿಳಿಗನ್ನಡ ನುಡಿ ಬಟ್ಟಲಿನಲ್ಲಿ ಸಂಸ್ಕೃತ ಸಾಹಿತ್ಯದ ಮಹಾ ಮಹಾ ಕವಿಗಳ ಸಾಹಿತ್ಯ ಸುಧೆಯ ಸಾರವನ್ನು ಕನ್ನಡ ಕಥಾರೂಪದಲ್ಲಿ ಸುರಿಯಲಾಗಿದೆ. ಇದರ ಸ್ವಾದ–ಸೌಂದರ್ಯಗಳಿಂದ ಸರ್ವರೂ ಸಂತೋಷ ಪಡಬೇಕೆಂಬುದೇ ನಮ್ಮ ಹೆಬ್ಬಯಕೆ.

ಮಾಲತೀ–ಮಾಧವ ನಾಟಕವನ್ನು ಬರೆದವರು **ಭವಭೂತಿ** ಮಹಾಕವಿ. ಈತ ಆತ್ಮವಿಶ್ವಾಸವುಳ್ಳ ಉದ್ದಾಮ ವಿದ್ವಾಂಸ. ಈತನ ವರ್ಣನಾ ವೈಖರಿ ಅನ್ಯ ಕವಿಗಳಲ್ಲಿ ಸಾಮಾನ್ಯವಾಗಿ ಕಾಣಲಾರದು. ವರ್ಣ್ಯ ವಸ್ತುವಿನ ಅಂಗೋಪಾಂಗಗಳನ್ನೆಲ್ಲ ಸಾದ್ಯಂತವಾಗಿ ಬಣ್ಣಿಸುವ ಬಲುಮೆ ಈತನ ವೈಶಿಷ್ಟ್ಯ. ಈ ಕವಿಯ ಕೃತಿಗಳು ಜನ ಸಾಮಾನ್ಯರು ನುಂಗುವ ತುತ್ತಲ್ಲ. ವಿದ್ವಾಂಸರು ಕೂಡ ತಲೆ ತುರಿಸಿಕೊಳ್ಳುತ್ತ ಅವು ಗಳ ತಿರುಳನ್ನು ತಿಳಿಯಬೇಕು. ಅವರಿಗೂ ಅವಗತವಾಗದಿದ್ದಾಗ— ಉತ್ಪತ್ಸ್ಯತೇಹಿ ಮಮಕೋऽಪಿ ಸಮಾನ ಧರ್ಮಾ। ಕಾಲೋಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ– ಎಂಬ ಭವಿಷ್ಯತ್ ಭರವಸೆ ಈತನಿಗೆ ಇದ್ದೇ ಇವೆ. ಇದು ದುರಹಂಕಾರವಲ್ಲ; ಸಾತ್ತ್ವಿಕ ಆತ್ಮವಿಶ್ವಾಸ.

ಮಾಲತೀ–ಮಾಧವರ ಪ್ರಣಯ ಪರಿಣಯವೇ ಈ ನಾಟಕದ ಕಥಾವಸ್ತು. ನಾಯಕ–ನಾಯಿಕೆಯರ ತಂದೆಗಳಾದ ದೇವರಾತ–ಭೂರಿವಸುಗಳ ಚಿರಂತನ ಮೈತ್ರಿ, ಈ ತಂದೆಗಳ ಸಹ ವಿದ್ಯಾರ್ಥಿನಿಯರಾದ ಕಾಮಂದಕೀ–ಸೌದಾಮಿನಿಯರ ಸರಸ ಸಜ್ಜ ನಿಕೆ, ಮಾಧವನ ಮಿತ್ರನಾದ ಮಕರಂದ, ನಾಯಕ–ನಾಯಿಕೆಯರ ಸಮ್ಮಿಲನಕ್ಕೆ

ಮಾಡುವ ನಿಷ್ಕಾಮ ಸಾಹಸ, ಮಾಧವನ ಕೆಚ್ಚೆದೆಯ ಕಲಿತನ, ಮಾಲತಿಯ ಪತಿ ಭಕ್ತಿ . .. .. ಮುಂತಾಗಿ ಹಲವಾರು ವಿಷಯಗಳು ಕಲಾಪೂರ್ಣವಾಗಿ ಕಳೆಗೊಂಡು ಬಂದಿವೆ ಈ ನಾಟಕದಲ್ಲಿ. ಅಭಿಜಾತ ಹಾಸ್ಯ ಈ ರೂಪಕದ ಹೊಸತೊಂದು ಮಾದರಿ.

ಕವಿಯ ಮೂಲಕೃತಿಗೆ ಅನ್ಯಾಯ – ಅಪಚಾರಗಳಾಗದಂತೆ, ಅದರಲ್ಲಿ ನಮ್ಮ ದೇನನ್ನೂ ಬೆರೆಸದಂತೆ, ಸಾರದ ಪಾಕವನ್ನು ಕನ್ನಡದಲ್ಲಿ ಇಳಿಸಿದೆ. ಕುಂದು–ಕೊರತೆ ಗಳನ್ನು ರಸಜ್ಞರು ಸಹೃದಯತೆಯಿಂದ ಸೂಚಿಸಿದರೆ, ಕೃತಜ್ಞತೆಯಿಂದ ಸ್ವೀಕರಿಸಿ ಮುಂದಿನ ಮುದ್ರಣದಲ್ಲಿ ಸರಿಪಡಿಸುತ್ತೇವೆ.

ಸಾಧನಕೆರೆ, ಧಾರವಾಡ
೧೫ – ೮ – ೧೯೬೧

—ಪಂ. ಕವಲಿ

ಮಾಲತೀ-ಮಾಧವ



೧. ಸ್ನಾತಕರ ಸತ್ ಸಂಕಲ್ಪ

ಪ್ರಾಚೀನ ಭರತಖಂಡದಲ್ಲಿ ಬಹಳ ವಿಶ್ವವಿದ್ಯಾಲಯಗಳು ಇದ್ದುವು. ಅವುಗಳಲ್ಲಿ ವಿದರ್ಭದೇಶದ ಪದ್ಮಾವತೀ ನಗರದ ವಿಶ್ವ ವಿದ್ಯಾಲಯ ಬಹಳ ಹೆಸರಾಗಿತ್ತು. ವಿದರ್ಭದೇಶವೆಂದರೆ ಈಗಿನ ವರಹಾಡ ಪ್ರಾಂತ.

ಪದ್ಮಾವತೀ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪದ್ಧತಿ ಚೆನ್ನಾಗಿತ್ತು; ಮತ್ತು ವಿಷಯಸಂಗ್ರಹ ಬಹಳ ಮೇಲ್ಮಟ್ಟದಲ್ಲಿ ಆಗುತ್ತಿತ್ತು. ಅದ ರಿಂದ, ದೂರ ದೂರದಿಂದ ಬಹಳ ಜನ ವಿದ್ಯಾರ್ಥಿಗಳು ಅಲ್ಲಿಗೆ ಬರು ತ್ತಿದ್ದರು. ವಿದ್ಯಾರ್ಥಿನಿಯರ ಸಂಖ್ಯೆಯೂ ಕಡಮೆ ಇರಲಿಲ್ಲ.

ಶಿಕ್ಷಣ ಮುಗಿದ ಮೇಲೆ ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ತಮ್ಮ ಊರುಗಳಿಗೆ ತೆರಳುತ್ತಿದ್ದರು; ಯೋಗ್ಯತೆ ಮತ್ತು ಗುರಿಗಳಿಗೆ ತಕ್ಕಂತೆ ಮುಂದಿನ ಬಾಳನ್ನು ರೂಪಿಸಿಕೊಳ್ಳುತ್ತಿದ್ದರು. ಆದರೆ ವಿದ್ಯಾ ಲಯದಲ್ಲಿ ಇರುವಷ್ಟು ಕಾಲ ಅವರೆಲ್ಲ ಒಡಹುಟ್ಟಿದವರಂತೆ ಪ್ರೇಮದಿಂದ ನಡಕೊಳ್ಳುತ್ತಿದ್ದರು. ಇದು ಆ ವಿದ್ಯಾಲಯದ ಶಿಕ್ಷಣಪದ್ಧತಿಯ ಮತ್ತು ಗುರುಗಳ ಸಹವಾಸದ ಹಿರಿಮೆಯೇ ಎನ್ನಬೇಕು.

ಈ ವಿದ್ಯಾಲಯದಲ್ಲಿ ದೇವರಾತ ಮತ್ತು ಭೂರಿವಸು ಎಂಬ ವಿದ್ಯಾರ್ಥಿಗಳು ಪರಮಮಿತ್ರರಾಗಿದ್ದರು. ಇಬ್ಬರ ಸ್ವಭಾವವೂ ಬಹಳ ಮಿದುವು, ಮಧುರ. ಎಷ್ಟೋ ವರ್ಷಗಳ ವರೆಗೆ ಅವರ ಅಭ್ಯಾಸ

ಕೂಡಿಯೇ ಸಾಗಿತು. ಓದುವಾಗಲೂ ಆಡುವಾಗಲೂ ಬೇರೆ ಕೆಲಸಗಳಲ್ಲಿ ಇರುವಾಗಲೂ ಕೂಡಿಯೇ ಇರುತ್ತಿದ್ದರು. ಸ್ವಲ್ಪದರಲ್ಲಿ ಹೇಳಬೇಕೆಂದರೆ- ದೇಹ ಎರಡು, ಜೀವ ಒಂದು, ಎಂಬಂತೆ ಅವರಿಬ್ಬರೂ ಹೊಂದಿಕೊಂಡಿದ್ದರು.

ಅದೇ ವಿದ್ಯಾಲಯದಲ್ಲಿ ಕಾಮುಂದರೆ ಸೌದಾಮಿನಿ ಈ ಇಬ್ಬರು ವಿದ್ಯಾರ್ಥಿನಿಯರು ಕಲಿಯುತ್ತಿದ್ದರು. ಇವರು ನಡೆ-ನುಡಿಗಳಲ್ಲಿ, ಬಾಳಿನ ರೀತಿ ನೀತಿಗಳಲ್ಲಿ ಬಹಳ ಪವಿತ್ರರಾಗಿದ್ದರು. ಇಬ್ಬರೂ ಜೀವದ ಗೆಳತಿಯರು.

ಗುಣ, ವಯಸ್ಸು, ಬುದ್ಧಿವಂತಿಕೆಗಳು ಈ ನಾಲ್ವರಲ್ಲಿಯೂ ಒಂದೇ ತೆರನಾಗಿದ್ದುವು. ಕಾಲಾಂತರದಲ್ಲಿ ಆ ವಿದ್ಯಾರ್ಥಿ-ವಿದ್ಯಾರ್ಥಿನಿಯರಲ್ಲಿ ಸ್ನೇಹ ಬೆಳೆಯಿತು. ಬರಬರುತ್ತ ಅದು ಆತ್ಮೀಯತೆಯಾಗಿ ಮಾರ್ಪಟ್ಟಿತು. ದೇವರಾತ, ಭೂರಿವಸು, ಕಾಮುಂದರೆ ಮತ್ತು ಸೌದಾಮಿನಿ ಒಡಹುಟ್ಟಿದವರಂತೆ ಆಗಿಬಿಟ್ಟರು. ಒಬ್ಬರೊಬ್ಬರ ಸುಖ-ದುಃಖಗಳಲ್ಲಿ ಎಲ್ಲರೂ ಭಾಗಿಗಳಾಗುತ್ತಿದ್ದರು.

ವರುಷಗಳು ಉರುಳಿದವು. ವಿದ್ಯಾಲಯದ ಕೊನೆಯ ಪರೀಕ್ಷೆ ಸಮೀಪಿಸಿತು. ಇನ್ನು ತಿಂಗಳೊಪ್ಪತ್ತಿನಲ್ಲಿ ಪ್ರೀತಿಯ ಗೆಳೆಯರು ಗೆಳತಿಯರು ಒಬ್ಬರಿಂದೊಬ್ಬರು ದೂರವಾಗಬೇಕು. ಈ ಅಗಲಿಕೆಯ ವಿಚಾರ ಅವರ ಕಣ್ಣುಗಳನ್ನು ಹನಿಯೂಡಿಸುತ್ತಿತ್ತು. ಹಾಗೆಯೇ, ಅವರು ಭವಿಷ್ಯತ್ತಿನಲ್ಲಿ ಬಾಳನ್ನು ರೂಪಿಸಿಕೊಳ್ಳುವ ವಿಚಾರವೂ ಅವರನ್ನು ಕಾಡುತ್ತಿತ್ತು. ಈ ತಳಮಳ ಕಳವಳಗಳು ದೇವರಾತ ಮೊದಲಾದವರನ್ನೂ ಬಾಧಿಸದೆ ಬಿಡಲಿಲ್ಲ.

ಒಮ್ಮೆ ಆ ನಾಲ್ವರು ವಿದ್ಯಾಲಯದ ಹೊರಗಿನ ಮೈದಾನದಲ್ಲಿ ಕುಳಿತರು; ತಾವು ಕಳೆದ ಕಾಲದ ಸುಖ-ದುಃಖಗಳನ್ನು ಮಾತನಾಡಿದರು. ಆಮೇಲೆ ಮುಂದಿನ ಆಯುಷ್ಯದ ಆಸೆ-ಆಕಾಂಕ್ಷೆಗಳ ಚರ್ಚೆ ನಡೆಯಿತು.

ಕಾಮುಂದರೆ—ನಾನೊಬ್ಬ ಬೌದ್ಧ ಭಿಕ್ಷುಕಿಯಾಗುವೆ. ಶಿಕ್ಷಣ ಸಂಸ್ಥೆಯನ್ನು ಆರಂಭಿಸುವೆ. ಸಮಾಜಶಿಕ್ಷಣವೇ ನನ್ನ ಜೀವನದ ಹೆಗ್ಗುರಿಯಾಗಿದೆ ಎಂದು ಹೇಳಿದಳು.

ಸೌದಾಮಿನಿ—ನಾನಂತೂ ಆಜನ್ಮ ಬ್ರಹ್ಮಚಾರಿಣಿಯಾಗಿಯೇ ಉಳಿಯುವೆ. ಯೋಗಸಾಧನೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವೆ. ಕಾಮುಂದರೆಯ ಕಣ್ಣರಿಕೆಯಲ್ಲಿಯೇ ಏನೆಲ್ಲವನ್ನೂ ನಡೆಸುವೆ ಎಂದು ತಿಳಿಸಿದಳು.

ದೇವರಾತ-ಭೂರಿವಸುಗಳು—ನಾವು ಯಾರೊಬ್ಬ ಅರಸರಲ್ಲಿ ಅಧಿಕಾರವನ್ನು ಪಡೆಯಬೇಕು. ಅದರಿಂದ ನಮ್ಮ ಜೀವನವೂ ಸುಖದಿಂದ ಸಾಗುವುದು; ಸಮಾಜಸೇವೆಯನ್ನು ಮಾಡಿದಂತೆಯೂ ಆಗುವುದು— ಎಂದು ನುಡಿದರು.

ಪರೀಕ್ಷೆ ಸಮೀಪಿಸಿದಂತೆ, ಅವರು ನಿತ್ಯವೂ ಕೂಡುತ್ತಿದ್ದರು; ಏನೇನನ್ನೋ ಮಾತಾಡುತ್ತಿದ್ದರು; ಮುಂದಾಗಬಹುದಾದ ಅಗಲಿಕೆಯ ನೋವನ್ನು ಹಗುರು ಮಾಡಿಕೊಳ್ಳುತ್ತಿದ್ದರು.

ಕೊನೆಗೊಮ್ಮೆ ಪರೀಕ್ಷೆ ಮುಗಿಯಿತು. ಎಲ್ಲರೂ ಒಳ್ಳೆಯ ತರಗತಿಯಲ್ಲಿಯೇ ತೇರ್ಗಡೆಯಾದರು; ವಿದ್ಯಾಲಯದ ಪದವಿಗಳನ್ನು ಪಡೆದರು. ಗುರುಗಳಿಂದ ಶುಭಾಶೀರ್ವಾದಗಳನ್ನು ಸಂಪಾದಿಸಿದರು.

ಇಂದು ಅವರೆಲ್ಲ ತಮ್ಮ ತಮ್ಮ ಸ್ಥಳಗಳಿಗೆ, ಗೊತ್ತು-ಗುರಿಗಳಿಗೆ ಹೊರಡಬೇಕು. ಈ ನಾಲ್ವರು ಮತ್ತೆ ಮೈದಾನದಲ್ಲಿ ಕೂಡಿದರು. ತಮ್ಮ ಮುಂದಿನ ಆಸೆ-ಆಕಾಂಕ್ಷೆಗಳ ಕನಸುಗಳನ್ನು ಹೇಳಿಕೊಂಡರು. ಇವರಲ್ಲಿ ಭೂರಿವಸು, ಕಾಮುಂದರೆ ಮತ್ತು ಸೌದಾಮಿನಿ ಪದ್ಮಾವತೀ ನಗರದಲ್ಲಿಯೇ ಅಕ್ಕಪಕ್ಕದ ಪ್ರದೇಶದಲ್ಲಿಯೇ ಇರತಕ್ಕವರು. ಎಂದಾದರೊಮ್ಮೆ ಅವರು ಒಬ್ಬರನ್ನೊಬ್ಬರು ಕಾಣಬಹುದಿತ್ತು; ತಮ್ಮ ಆಗುಹೋಗುಗಳ ಬಗೆಗೆ ಮಾತನಾಡಬಹುದಿತ್ತು. ಆದರೆ, ದೇವರಾತ ಅಲ್ಲಿಂದ ಬಲು

ದೂರ ಹೋಗತಕ್ಕವ. ಪುನಃ ತಮ್ಮ ಮಿತ್ರ-ಮಿತ್ರೆಯರನ್ನು ಕಾಣಬಹುದೆಂಬ ಭರವಸೆ ಇರಲಿಲ್ಲ. ಒಂದು ವೇಳೆ, ತನ್ನ ಊರಿನ ಅರಸನಲ್ಲಿ ನೌಕರಿ ಸಿಕ್ಕರಂತೂ ಆತ ಇವರೆಲ್ಲರಿಂದ ದೂರವಾದಂತೆಯೇ. ಆ ಇಬ್ಬರು ಅರಸುಗಳಲ್ಲಿ ಅಷ್ಟೊಂದು ಸಹಕಾರ ಸಹಾನುಭೂತಿ ಇರಲಿಲ್ಲ. ಇದನ್ನೆಲ್ಲ ನೆನೆದಾಗ ದೇವರಾತನಿಗೆ ಕಣ್ಣೀರು ಒತ್ತರಿಸಿ ಬಂದುವು; ಸಣ್ಣ ಮಗುವಿನಂತೆ ಅತ್ತುಬಿಟ್ಟ !

ಕೊನೆಯಲ್ಲಿ ಆತ ತನ್ನದೊಂದು ಬಯಕೆಯನ್ನು ಹೇಳಿದ—

ನಾನು ನಿಮ್ಮೆಲ್ಲರನ್ನು ಪುತ್ತೆ ಕಾಣಲಿಕ್ಕಿಲ್ಲ. ಆದರೆ ಭೂರಿವಸುವಿನ ಮತ್ತು ನನ್ನ ಸ್ನೇಹ ಎಂದಿನಂತೆ ಮುಂದೆಯೂ ಉಳಿಯಬೇಕು. ಅದಕ್ಕಾಗಿ ನಮ್ಮ ಗೆಳೆತನ ಆಪ್ತತ್ವದಲ್ಲಿ ಮಾರ್ಪಡಬೇಕೆಂದು ನನ್ನ ಹೆಬ್ಬಯಕೆ. ನಮ್ಮಿಬ್ಬರಿಗೂ ಹೆಣ್ಣು ಗಂಡು ಮಕ್ಕಳು ಹುಟ್ಟಬಹುದು; ಹುಟ್ಟುತ್ತವೆ. ಆ ಮಕ್ಕಳನ್ನು ಒಬ್ಬರೊಬ್ಬರಿಗೆ ಕೊಟ್ಟು ಮದುವೆ ಮಾಡಬೇಕೆಂದು ಬಯಸುತ್ತೇನೆ.... !

ಭೂರಿವಸು ಮಿತ್ರನ ಕೈಮೇಲೆ ಕೈಹಾಕಿ ಒಪ್ಪಿಗೆಯನ್ನು ಕೊಟ್ಟ. ಕಾಮಂದರೆ ಸೌದಾಮಿನಿಯರು ಆ ಮದುವೆಗೆ ತಾವು ಏನಾದರೂ ಅಡೆತಡೆ ಬಂದರೆ, ಅದನ್ನೇ ನಿವಾರಿಸುವುದಕ್ಕೆ ತಾವು ಶಕ್ತಿಮೀರಿ ಪ್ರಯತ್ನಿಸುವುದಾಗಿಯೂ ವಚನವಿತ್ತರು.

ಅಗಲಿಕೆಯ ಕ್ಷಣ ಬಂದೇ ಬಂತು. ಎಲ್ಲರೂ ಭಾರವಾದ ಹೃದಯದಿಂದ ಒಬ್ಬರನ್ನೊಬ್ಬರು ಬೀಳ್ಕೊಟ್ಟರು.

ದೇವರಾತ ಕುಂಡಲಪುರದ ರಾಜಾಸ್ಥಾನದಲ್ಲಿ ಸಣ್ಣ ಅಧಿಕಾರಿಯಾದ; ಬರಬರುತ್ತ ತನ್ನ ಬುದ್ಧಿವಂತಿಕೆಯ ಬಲದಿಂದ ಮುಖ್ಯಮಂತ್ರಿಯಾದ. ಭೂರಿವಸು ಪದ್ಮಾವತೀ ರಾಜಾಸ್ಥಾನದಲ್ಲಿಯೇ ಅಧಿಕಾರವನ್ನು ದೊರಕಿಸಿದ; ತನ್ನ ಕರ್ತವ್ಯನಿಷ್ಠೆ ಚಾಣಾಕ್ಷತನಗಳಿಂದ ಮುಖ್ಯಮಂತ್ರಿಪದಕ್ಕೆ ಏರಿದ. ಕಾಮಂದರೆ ಪದ್ಮಾವತಿಯ ನೆರೆಯಲ್ಲಿಯೇ

ಆಶ್ರಮವನ್ನು ಸ್ಥಾಪನೆಮಾಡಿದಳು. ಅಲ್ಲಿ ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ಕಲಿಸುವ ಪವಿತ್ರ ಕಾರ್ಯವನ್ನು ಕೈಕೊಂಡಳು. ಆಜನ್ಮ ಬ್ರಹ್ಮಚಾರಿಣಿ ದೀಕ್ಷೆಯನ್ನು ಹೊಂದಿದಳು. ಈಕೆ ಸಕಲ ಶಾಸ್ತ್ರಗಳಲ್ಲಿಯೂ ನಿಪುಣಳಾದುದರಿಂದ, ಸೌದಾಮಿನಿ ಕೆಲವು ಕಾಲ ಈ ಆಶ್ರಮದಲ್ಲಿಯೇ ಅಭ್ಯಾಸ ಮಾಡಿದಳು; ಬಳಿಕ ಯೋಗಶಾಸ್ತ್ರದ ಅಭ್ಯಾಸಕ್ಕಾಗಿ ಶ್ರೀ ಪರ್ವತಕ್ಕೆ ಹೋದಳು.

೨. ಸಂಕಲ್ಪ ಸಿದ್ಧಿಯ ಮಾರ್ಗದಲ್ಲಿ

ದೈವದ ಆಟವೂ ವಿಚಿತ್ರವೇ ಎನ್ನಬೇಕು. ಗೆಳೆಯರ ಸಂಕಲ್ಪದಂತೆ ದೇವರಾತನಿಗೆ ಗಂಡುಮಗು ಹುಟ್ಟಿತು; ಭೂರಿವಸು ಹೆಣ್ಣುಮಗಳ ತಂದೆಯಾದ. ಆದರೆ ಈ ಆನಂದದ ಸುದ್ದಿಗಳನ್ನು ಅವರು ಪರಸ್ಪರರಿಗೆ ಏಕೆ ತಿಳಿಸಲಿಲ್ಲವೋ! ತಮ್ಮ ಮೊದಲಿನ ನಿರ್ಧಾರವನ್ನು ಏಕೆ ಬಹಿರಂಗ ಪಡಿಸಲಿಲ್ಲವೋ! ಬಹುಶಃ ಎರಡೂ ರಾಜಮನೆತನಗಳ ರಾಜಕಾರಣ ಅಡ್ಡ ಬಂದಿರಬೇಕು.

ದೇವರಾತ ಮಗನಿಗೆ **ಮಾಧವ** ಎಂದು ಹೆಸರಿಟ್ಟ. ಈ ರಾಜ್ಯದ ಸೇನಾಪತಿಗೆ ಒಬ್ಬ ಮಗನಾದ. ಆತನ ಹೆಸರು ಮಕರಂದ. ಮಾಧವ ಮಕರಂದರು ಒಂದೇ ವಯಸ್ಸಿನವರು. ಎಳೆತನದಲ್ಲಿಯೇ ಅವರಿಬ್ಬರೊಳಗೆ ಒಡಹುಟ್ಟಿದ ತಿಳಿವಳಿಕೆ ಬೆಳೆದು ಬಂದಿತು. ಊಟ, ಉಡಿಗೆ, ಆಟ, ನೋಟ ಎಲ್ಲವುಗಳಲ್ಲಿಯೂ ಇಬ್ಬರೂ ಒಂದಾಗಿಯೇ ಇರುತ್ತಿದ್ದನು.

ಮಕ್ಕಳು ಅಯ್ದಾರು ವರ್ಷದವರಾದರು. ಕುಂಡಲಪುರದಲ್ಲಿಯೇ ಅವರ ಎಳೆತನದ ವಿದ್ಯಾಭ್ಯಾಸ ಆರಂಭವಾಯಿತು. ಬುದ್ಧಿಬಲ, ಶರೀರ ಬಲಗಳಲ್ಲಿ ಒಳಿತಾದ ಶಿಕ್ಷಣ ದೊರೆಯಿತು. ಶಾಸ್ತ್ರ ಮತ್ತು ಶಸ್ತ್ರ

ವಿದ್ಯೆಗಳಲ್ಲಿ ಚೆನ್ನಾಗಿ ನುರಿತರು. ಬೇರೆ ಕಲೆಗಳಲ್ಲಿಯೂ ನಿಪುಣರಾದರು. ಈಗ ಅವರಿಗೆ ಸುಮಾರು ಇಪ್ಪತ್ತು ವರುಷಗಳ ಹೊಸ ಹರಯ. ಅವರಿಗೆ ಇನ್ನೂ ಹೆಚ್ಚಿನ ಶಿಕ್ಷಣ ಕೊಡಿಸಬೇಕು, ಎನಿಸಿತು ದೇವರಾತನಿಗೆ. ಮಂತ್ರಿಗಳ ಮಾತಿಗೆ ಸೇನಾಪತಿಗಳೂ ಒಡಂಬಟ್ಟರು. ಪದ್ಮಾವತೀ ವಿಶ್ವವಿದ್ಯಾಲಯದ ಪ್ರಸಿದ್ಧಿ ಎಂದಿನಂತೆ ಇದ್ದೇ ಇತ್ತು. ಅಲ್ಲಿಯ ಒಳ ಹೊರಗುಗಳನ್ನು ದೇವರಾತ ಚೆನ್ನಾಗಿ ಬಲ್ಲನು. ಆದುದರಿಂದ ಮಾಧವ-ಮಕರಂದರನ್ನು ಪದ್ಮಾವತಿ ನಗರದ ವಿಶ್ವವಿದ್ಯಾಲಯಕ್ಕೆ ಕಳಿಸಲಾಯಿತು. ಅವರ ಸಂಗಡ ಆಪ್ತಸೇವಕನಾದ ಕಲಹಂಸನೂ ಅಲ್ಲಿಗೆ ಬಂದ.

ಪದ್ಮಾವತೀ ನಗರಕ್ಕೆ ಇವರಿಬ್ಬರೂ ಹೊಸಬರು. ಅಲ್ಲಿ ಆಪ್ತೇಷ್ಟರು ಇರಲಿಲ್ಲ. ಮೇಲಾಗಿ ಚಂಚಲವಾದ ತರುಣ ವಯಸ್ಸು. ಇದರ ಮೇಲ್ವಿಚಾರಣೆ ನೋಡಿಕೊಳ್ಳಲು ಹಿರಿಯರೊಬ್ಬರು ಬೇಕಾಗಿತ್ತು. ದೇವರಾತನಿಗೆ ತಮ್ಮ ಹಳೆಯ ಗೆಳತಿ ಕಾಮಂದಕಿಯ ನೆನಪಾಯಿತು. ಆಕೆ ಅಕ್ಕಪಕ್ಕದಲ್ಲಿಯೇ ಆಶ್ರಮವನ್ನು ಸ್ಥಾಪಿಸಿದ ವಿಷಯವೂ ಆತನಿಗೆ ತಿಳಿದಿತ್ತು. ಈ ಕಾರಣದಿಂದ, ಮಕ್ಕಳ ಮುಂದಿನ ಅಭ್ಯಾಸ ಆರೋಗ್ಯ ಮುಂತಾದವುಗಳ ಮೇಲ್ವಿಚಾರಣೆ ಮಾಡುವದಕ್ಕೆ ಕಾಮಂದಕಿಗೆ ಬರೆದರು. ಕಾಮಂದಕಿಯೂ ಮಿತ್ರರ ಮಾತನ್ನು ಮನಸ್ಸಿನಿಂದ ಒಪ್ಪಿದಳು.

ಮಾಧವ, ಪದ್ಮಾವತಿಗೆ ಬಂದ ದಿವಸವೇ ಕಾಮಂದಕಿಯನ್ನು ಕಂಡ; ವಿನಯದಿಂದ ಆಕೆಗೆ ನಮಸ್ಕಾರ ಮಾಡಿದ. ಮಕರಂದನೂ ತನ್ನ ಗೆಳೆಯನನ್ನೇ ಅನುಸರಿಸಿದ. ಅವರ ಸುಂದರ ರೂಪ, ಸದ್ಗುಣಗಳ ನಡತೆಯನ್ನು ಕಂಡು ಕಾಮಂದಕಿಗೆ ತುಂಬಾ ಆನಂದವಾಯಿತು. ತನ್ನ ಧರ್ಮಬಂಧುವಿನ ಮಗ ಮಾಧವನನ್ನು ಪ್ರೀತಿಯಿಂದ ಸ್ವಾಗತಿಸಿದಳು. ಮಕರಂದನ ಪರಿಚಯವನ್ನೂ ಮಾಡಿಕೊಂಡಳು. ಅವರಿಬ್ಬರ ಅನ್ಯೋನ್ಯ ಪ್ರೇಮ ಕಾಮಂದಕಿಗೆ ತುಂಬಾ ಮೆಚ್ಚಿಗೆಯಾಯಿತು.

ಮಾಧವ ಮಕರಂದರು ಪದ್ಮಾವತಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ವನ್ನು ಪಡೆದರು. ಬಿಡುವಿನ ದಿನಗಳಲ್ಲಿ ಕಾಮಂದಕಿಯ ಆಶ್ರಮಕ್ಕೆ ತಪ್ಪದೆ ಹೋಗುತ್ತಿದ್ದರು; ತಮ್ಮ ಯೋಗಕ್ಷೇಮಗಳನ್ನು ನಿವೇದಿಸು ತ್ತಿದ್ದರು. ವಿದ್ಯಾಭ್ಯಾಸದಲ್ಲಿ ಅವರ ಪ್ರಗತಿ-ಪ್ರೀತಿಗಳನ್ನು ಕೇಳಿ ಕಾಮಂದಕಿಗೆ ಬಹಳ ಆನಂದವಾಗುತ್ತಿತ್ತು. ಕೆಲಕೆಲವು ವೇಳೆ ತಾನಾಗಿಯೇ ವಿದ್ಯಾಲಯಕ್ಕೆ ಹೋಗುತ್ತಿದ್ದಳು. ಅವರ ಯೋಗ ಕ್ಷೇಮವನ್ನು ಕೇಳಿಕೊಂಡು ಬರುತ್ತಿದ್ದಳು. ಅವರ ಬುದ್ಧಿವಂತಿಕೆ, ಸದಾಚಾರ, ಮಧುರವಾದ ಮಾತುಗಾರಿಕೆ ಇವು ಕಾಮಂದಕಿಯಲ್ಲಿ ತಾಯ್ತನದ ಪ್ರೇಮವನ್ನು ಹುಟ್ಟಿಸಿದ್ದವು.

ಭೂರಿವಸು ಮಗಳಿಗೆ **ಮಾಲತಿ** ಎಂದು ಹೆಸರಿಟ್ಟ. ಮಾಲತಿ ಬಲು ಮುದ್ದಾದ ಹುಡುಗಿ. ಮಿತ್ರನ ಮಗಳನ್ನು ನೋಡಲು ಕಾಮಂದಕಿ ಆಗಾಗ ಭೂರಿವಸುವಿನಲ್ಲಿ ಬರುತ್ತಿದ್ದಳು. ಮಗುವಿನ ಮುದ್ದುತನಕ್ಕೆ ಬೆರಗಾಗಿ ಅಲ್ಲಿಯೇ ಬಲು ಹೊತ್ತುಕಳೆಯುತ್ತಿದ್ದಳು. ಒಮ್ಮೊಮ್ಮೆ ತನ್ನ ಆಶ್ರಮಕ್ಕೂ ಕರೆದೊಯ್ಯುತ್ತಿದ್ದಳು. ಮಾಲತಿಯ ಮುಗ್ಧ ಮಾತು ಗಳನ್ನು ಕೇಳಿ ಆಶ್ರಮವಾಸಿಯರು ಆನಂದಪಡುತ್ತಿದ್ದರು.

ಮಾಲತಿಗೆ ಅಯ್ದಾರು ವರ್ಷ ಮುಗಿದುವು. ತಾನಾಗಿಯೇ ಕಾಮಂದಕಿಯ ಆಶ್ರಮಕ್ಕೆ ಹೋಗತೊಡಗಿದಳು. ಅಲ್ಲಿಯೇ ಆಕೆಯ ಬಾಲ್ಯದ ಶಿಕ್ಷಣ ಆರಂಭವಾಯಿತೆಂದರೂ ಸರಿಯೇ. ಓದುಬರೆಹ ಗಳನ್ನು ತಡವಿಲ್ಲದೆ ಕಲಿತಳು. ಶಾಸ್ತ್ರಗಳ ಅಭ್ಯಾಸವನ್ನು ಮಾಡಿಧಳು. ಚಿತ್ರಕಲೆ, ಹೆಣಿಗೆ ಮೊದಲಾದ ಕಲೆಗಳಲ್ಲಿಯೂ ನಿಪುಣೆಯಾದಳು. ಮಾಧವ ಪದ್ಮಾವತೀ ನಗರಕ್ಕೆ ಬಂದಾಗ, ಮಾಲತಿ ಹದಿನಾರು, ಹದಿ ನೇಳು ವರುಷಗಳ ನವತರುಣಿ. ಆಕೆಯ ಸೌಂದರ್ಯ-ಸದ್ಗುಣ-ಸದಾ ಚಾರಗಳು ಯಾರ ಮೆಚ್ಚುಗೆಯನ್ನೂ ಪಡೆಯುವಂತಿದ್ದವು.

ಮಾಧವ-ಮಾಲತಿಯರನ್ನು ಕಂಡಾಗ ಕಾಮಂದಕಿಗೆ ಹಳೆಯ ನೆನಪು ಮರುಕಳಿಸುತ್ತಿತ್ತು. ವಿದ್ಯಾಲಯದಿಂದ ಅಗಲುವಾಗ ಭೂರಿ

ವಸು, ದೇವರಾತರು ಸುದೈವದಿಂದ ನಮಗೆ ಹೆಣ್ಣು ಗಂಡು ಹುಟ್ಟಿದರೆ ಆ ಮಕ್ಕಳ ಮದುವೆಯನ್ನು ಮಾಡೋಣ; ಆಪ್ತವ್ಯವನ್ನು ಬೆಳೆಸೋಣ– ಎಂದುದು ಆಕೆಗೆ ಪದೇ ಪದೇ ನೆನಪಾಗುತ್ತಿತ್ತು. ಮಾಲತೀ–ಮಾಧವ ರಾದರೂ ರೂಪ ಗುಣ ಯೌವನಗಳಿಂದ ಒಬ್ಬರಿಗೊಬ್ಬರು ಅನುರೂಪ ರಾಗಿದ್ದರು. ಅವರ ದಾಂಪತ್ಯಕ್ಕೆ ಯಾವ ಕೊರತೆಯೂ ಕಾಣುತ್ತಿರ ಲಿಲ್ಲ. ಇಷ್ಟೇ ಅಲ್ಲ; ಅವರ ಮದುವೆಯಿಂದ ಮಿತ್ರರ ಹಳೆಯ ಹರ ಕೆಯೂ ಕೈಗೂಡುತ್ತಿತ್ತು. ಆದರೆ....?

ಈ ಮದುವೆ ಸರಳವಾಗಿ ಸುಗಮವಾಗಿ ಸಾಧ್ಯವಾಗಬಹುದೇ ? ಈ ಚಿಂತೆ ಕಾಮಂದರೆಯನ್ನು ಕಾಡಿಸುತ್ತಿತ್ತು. ಮೊದಲನೆಯದಾಗಿ, ದೇವರಾತ ಮಗನ ಮದುವೆಯ ವಿಚಾರವನ್ನು ಕಾಮಂದರೆಗೆ ತಿಳಿಸಿರ ಲಿಲ್ಲ. ಎರಡನೆಯದಾಗಿ, ಮಾಲತಿ–ಮಾಧವರು ಯಾರು, ಯಾರ ಮಕ್ಕಳು...ಎಂಬುದು ಇಬ್ಬರಿಗೂ ತಿಳಿದಿರಲಿಲ್ಲ. ಮೂರನೆಯದಾಗಿ, ದೇವರಾತನಿಗೆ ಮಾಲತಿಯ ಬಗೆಗೆ ಮತ್ತು ಭೂರಿವಸುವಿಗೆ ಮಾಧವನ ಬಗೆಗೆ ಏನೂ ತಿಳಿದಿರಲಿಲ್ಲ. ಇಂಥಾ ಸ್ಥಿತಿಯಲ್ಲಿ ಮತ್ತೊಂದು ಆತಂಕ ನಡುವೆ ಕಾಯ್ದು ಕುಳಿತಿತ್ತು.

ಪದ್ಮಾವತೀ ನಗರದ ದೊರೆಗೆ ನಂದನ ಎಂಬ ಸರದಾರನಿದ್ದ. ಅವನಿಗಾಗಲೇ ನಾಲ್ವತ್ತರ ಇಳಿವಯಸ್ಸು. ಆದರೂ ಹೆಂಡತಿಯ ಹುಚ್ಚನ್ನು ಹಚ್ಚಿಕೊಂಡಿದ್ದ; ಮಾಲತಿಯನ್ನೇ ಮೆಚ್ಚಿದ್ದ. ಅವನಿಗೆ ಅರಸನ ಬೆಂಬಲವಿತ್ತು. ಅರಸು, ಭೂರಿವಸು ಮಂತ್ರಿಯನ್ನು ಕರೆದು– ನಿನ್ನ ಮಗಳಾದ ಮಾಲತಿಯನ್ನು ನಂದನ ಸರದಾರನಿಗೆ ಕೊಡಬೇಕು– ಎಂದು ಕೇಳಿಬಿಟ್ಟಿದ್ದ ! 'ಮಹಾರಾಜರಿಗೆ ತಮ್ಮ ಮಗಳ ಮೇಲೆ ಸಂಪೂರ್ಣ ಅಧಿಕಾರವಿದೆ' ಎಂದಿದ್ದ ಮಂತ್ರಿ. ಈ ಮಾತಿನ ಅರ್ಥ ಹೇಗೂ ಆಗಬಹುದಿತ್ತು. ಕಟ್ಟಗೆ ಹಚ್ಚಿದಾಗ ಮಾತ್ರ ಭೂರಿವಸು ಅರಸನ ಮಾತಿಗೆ ಒಪ್ಪದೆ ಬೇರೆ ಹಾದಿಯೇ ಇರಲಿಲ್ಲ.

ಕಾಮಂದರಿಗೆ ಇವೆಲ್ಲವುಗಳ ಅರಿವೂ ಚೆನ್ನಾಗಿತ್ತು. ಮಾಲತೀ-ಮಾಧವರ ಮದುವೆಯಂತೂ ಆಗಲೇಬೇಕು; ಆದರೆ ಭೂರಿವಸುವಿಗೆ ಯಾವ ತೊಂದರೆಯೂ ಆಗಿರಬಾರದು-ಇಂತಹದೊಂದು ಹಾದಿಯನ್ನು ಹುಡುಕಬೇಕಾಗಿತ್ತು. ಮದುವೆಯಾಗಬೇಕಾದ ಗಂಡುಹೆಣ್ಣುಗಳಲ್ಲಿ ಅವರವರ ಬಗೆಗೆ ಶ್ರೇಷ್ಠವಾದ ಪ್ರೇಮವನ್ನು ಹುಟ್ಟಿಸುವುದೇ ಕಾಮಂದರಿ ಕೈಕೊಂಡ ಮೊತ್ತ ಮೊದಲನೆಯ ಕೆಲಸವಾಯಿತು. ಮಾಧವ-ಮಕರಂದರು ಆಶ್ರಮಕ್ಕೆ ಬಂದಾಗ ಅವರ ಇದಿರಿಗೆ ಮಾಲತಿಯ ರೂಪ ಗುಣ ಶೀಲಗಳನ್ನು ಹೊಗಳುತ್ತಿದ್ದಳು; ಮಾಲತಿಯ ಇದಿರಿಗೆ ಮಾಧವನ ಮನೋಹರತೆಯನ್ನು ಬಣ್ಣಿಸುತ್ತಿದ್ದಳು. ಪರಿಣಾಮವಾಗಿ, ಒಬ್ಬರನ್ನೊಬ್ಬರು ನೋಡುವ ಕುತೂಹಲ ಇಬ್ಬರಲ್ಲಿಯೂ ಮೊಳೆತಿತು. ಆದರೆ ನೋಡುವ ಪ್ರಸಂಗವೇ ಬಂದಿರಲಿಲ್ಲ.

ಒಮ್ಮೆ ಮಾಧವ ಭೂರಿವಸುವಿನ ಅರಮನೆಯ ಹತ್ತಿರ ಹಾಯು ಹೋಗುತ್ತಿದ್ದ. ಮಾಲತಿ ಮತ್ತು ಗೆಳತಿಯರು ಆತನನ್ನು ನೋಡಿದರು. ಯಾರೋ ಪರಪ್ರಾಂತದ ತರುಣನಿರಬೇಕು. ಇಲ್ಲಿಗೇತಕ್ಕೆ ಬಂದಿರಬಹುದು? ಗೆಳತಿಯರು ತಮ್ಮತಮ್ಮಲ್ಲಿಯೇ ಮಾತನಾಡಿದರು. ಕಾಮಂದರಿ ಅಲ್ಲಿಯೇ ಇದ್ದಳು. ಅವರ ಕುತೂಹಲವನ್ನು ವ್ಯರ್ಥವಾಗಗೊಡಲಿಲ್ಲ. ಆ ತರುಣ ಕುಂಡಲಪುರದ ಮಂತ್ರಿಯ ಮಗ, ಮಾಧವ ಎಂದು ಹೆಸರು. ಕುಲಶೀಲಸಂಪನ್ನ. ಬಹಳ ಬುದ್ಧಿವಂತ ಶೂರತನದಲ್ಲಿಯೂ ಕಡಮೆಯಿಲ್ಲ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಈ ವಿದ್ಯಾಲಯಕ್ಕೆ ಬಂದಿದ್ದಾನೆ........ಮುಂತಾದ ವಿವರಗಳನ್ನು ತಿಳಿಸಿದಳು.

ಕಾಮಂದರಿಗೆ ಅವಲೋಕಿತಾ ಎಂಬ ಪಟ್ಟಶಿಷ್ಯಳಿದ್ದಳು. ಅವಳು ಒಳ್ಳೆಯ ವ್ಯವಹಾರಚತುರೆ; ಮುಂಧೋರಣೆ. ಕಾಮಂದರಿಯ ವಿಚಾರಸರಣಿಯನ್ನೇ ಯಾವಾಗಲೂ ಮುಂದುವರಿಸುತ್ತಿದ್ದಳು. ಮಾಲತೀ-ಮಾಧವರ ವಿವಾಹದ ಬಗೆಗೆ ಕಾಮಂದರಿಯ ಅಂತರಂಗ

ವನ್ನು ಆಕೆ ಚೆನ್ನಾಗಿ ತಿಳಕೊಂಡಿದ್ದಳು. ಸಮಯ ಸಿಕ್ಕಾಗಲೆಲ್ಲ ಮಾಲತಿಯ ಇದಿರಿಗೆ ಮಾಧವನ ಗುಣ, ರೂಪಗಳ ವರ್ಣನೆ ಮಾಡುತ್ತಿದ್ದಳು.

ಕಾಮಂದರೆ ಈ ವಿವಾಹವನ್ನು ಮಾಡಿಯೇ ತೀರಬೇಕೆಂದು ನಿಶ್ಚಯಿಸಿದ್ದಳು. ಅದಕ್ಕೆ ಬರುವ ಅಡೆತಡೆಗಳನ್ನು ಕಳೆಯುವುದಕ್ಕೆ ಅವಲೋಕಿತೆಯ ನೆರವು ಬೇಕಾಗಿತ್ತು. ಅದಕ್ಕಾಗಿ ಒಮ್ಮೆ ಶಿಷ್ಯಳನ್ನು ಕೇಳಿದಳು—

' ಮಗು ಅವಲೋಕಿತೇ, ಮಾಲತೀ-ಮಾಧವರ ಮದುವೆ ಆಗಬಹುದಲ್ಲವೇ ? ನನ್ನ ಬಯಕೆ ಬಯಲಾಗಲಾರದಷ್ಟೇ ?

ಅವಲೋಕಿತೆ ವ್ಯವಹಾರಚತುರೆ; ಆದರೆ ಮಾತಿನಲ್ಲಿ ದುಡುಕು ಬಹಳ. ತನ್ನ ಗುರುವಿಗೆ ತುಸು ಸಡಿಲಾಗಿಯೇ ಕೇಳಿದಳು—

" ಭಗವತಿ, ತಾವು ಬೌದ್ಧ ಸನ್ಯಾಸಿನಿ; ಕಾವಿಯ ಬಟ್ಟೆಗಳನ್ನು ತೊಟ್ಟಿದ್ದೀರಿ; ಸರ್ವ ಸುಖ-ವಿಲಾಸಗಳಿಗೆ ನೀರುಬಿಟ್ಟಿದ್ದೀರಿ. ಹೀಗಿದ್ದರೂ ಮಾಲತೀ-ಮಾಧವರ ಮದುವೆಯ ಬಗೆಗೆ ಎಷ್ಟೊಂದು ಚಿಂತೆಯನ್ನು ಹಚ್ಚಿಕೊಂಡಿದ್ದೀರಲ್ಲ ? ಬಹಳ ವಿಚಿತ್ರವೆನಿಸುತ್ತಿದೆ ! "

ಅವಲೋಕಿತೆಯನ್ನು ತನ್ನ ನಂಬಿಗೆಯಲ್ಲಿ ತೆಗೆದುಕೊಳ್ಳಬೇಕಾಗಿತ್ತು. ಆದುದರಿಂದ, ಕಾಮಂದರೆ ಅಂದಿನ ಇಂದಿನ ಮುಂದಿನ ಎಲ್ಲ ವಿಚಾರಗಳನ್ನು ಶಿಷ್ಯೆಗೆ ಸ್ವಲ್ಪದರಲ್ಲಿಯೇ ತಿಳಿಸಿದಳು.

ಮಾಧವನ ತಂದೆ ದೇವರಾತ ಮತ್ತು ಮಾಲತಿ ತಂದೆ ಭೂರಿವಸು ವಿದ್ಯಾಲಯದಲ್ಲಿದ್ದಾಗ ಜೀವದ ಗೆಳೆಯರು. ಪರೀಕ್ಷೆ ಮುಗಿದ ಮೇಲೆ ಅವರು ಒಬ್ಬರನ್ನೊಬ್ಬರು ಅಗಲಬೇಕಾಯಿತು. ಈ ಸ್ನೇಹ ಎಂದೆಂದಿಗೂ ಉಳಿಯಲೇಬೇಕೆಂದು ಇಬ್ಬರೂ ಬಯಸುತ್ತಿದ್ದರು. ತಮಗೆ ಹೆಣ್ಣು ಗಂಡು ಮಕ್ಕಳು ಹುಟ್ಟಿದರೆ ಎರಡೂ ಮನೆತನಗಳಲ್ಲಿ ಬೀಗತನವನ್ನು ಬೆಳೆಸಬೇಕು, ಎಂದು ಗೊತ್ತುಮಾಡಿಕೊಂಡರು. ದೇವರ ದಯೆಯಿಂದ

ಅವರ ಇಚ್ಛೆ ಹಣ್ಣಾಗುವ ಕಾಲ ಬಂದಿದೆ. ಆದರೆ ಮಾಲತೀ-ಮಾಧವರ ಮದುವೆಗೆ ಅರಸು ಅಡ್ಡ ಬಂದಿದ್ದಾನೆ; ನಂದನ ಸರದಾರನಿಗೆ ಮಾಲತಿಯನ್ನು ಕೊಡಿಸಬೇಕೆನ್ನುತ್ತಾನೆ. ಭೂರಿವಸು ಅರಸರ ಅಪ್ಪಣೆಯನ್ನು ಮುರಿಯುವಂತಿಲ್ಲ. ಅದಕ್ಕಾಗಿ ನಾವು ಸರ್ವರೀತಿಯಿಂದಲೂ ತಂತ್ರಗಾರಿಕೆಯನ್ನು ನಡೆಸಬೇಕು; ಮಾಲತೀ-ಮಾಧವರ ಪ್ರೇಮವಿವಾಹ ನಡೆಯುವಂತೆ ನೋಡಿಕೊಳ್ಳಬೇಕು. ಹೀಗಾದರೆ, ಮಿತ್ರರು ತಮ್ಮ ಮಾತನ್ನು ನಡೆಸಿದಂತಾಗುತ್ತಿದೆ; ತರುಣದಂಪತಿಗಳಿಗೆ ಸುಖ-ಸಮಾಧಾನ ಸಿಕ್ಕುತ್ತವೆ; ಭೂರಿವಸು ಅಪವಾದದಿಂದ ದೂರವಾಗುತ್ತಾನೆ. ಆದುದರಿಂದ, ಈ ಕೆಲಸವನ್ನು ಅವಲೋಕಿತೆ, ನೀನು ಬಹಳ ಕುಶಲತೆಯಿಂದ ನೆರವೇರಿಸಬೇಕು. ನಿನ್ನ ಸಹಾಯಕ್ಕೆ ನಾನು ಇದ್ದೇ ಇರುತ್ತೇನೆ.

೨. ಮಾಲತೀ ಮಾಧವರ ಮೊದಲ ನೋಟ

ವಸಂತ ಋತು ಬಂದಿತು. ಪ್ರತಿ ವರ್ಷದಲ್ಲಿ ಕಾಮದೇವ ಉಪವನದಲ್ಲಿ ಮದನಮಹೋತ್ಸವ ನಡೆಯಲಿದ್ದಿತು. ನಗರದ ನರನಾರಿಯರು ಅವರಲ್ಲಿಯೂ ಹೆಚ್ಚಾಗಿ ತರುಣ ತರುಣಿಯರು-ಆ ಉತ್ಸವವನ್ನು ನೋಡಲು ಸೇರುತ್ತಿದ್ದರು. ಅದೊಂದು ಕಣ್ಣು ಮನಸ್ಸುಗಳಿಗೆ ಹಬ್ಬವನ್ನು ಮಾಡುವ ಉತ್ಸವ. ಅದನ್ನು ನೋಡಲು ಬರಲೇಬೇಕೆಂದು ಅವಲೋಕಿತೆ ಮಾಲತಿಗೆ ಹೇಳಿದ್ದಳು. ಅದರಂತೆ ಮಾಧವನಿಗೂ ತಿಳಿಸಿದ್ದಳು.

ಮಾಲತಿ, ಗೆಳತಿ-ದಾಸಿಯರೊಡನೆ ಉತ್ಸವಕ್ಕೆ ಬಂದಳು. ನೇರವಾಗಿ ಕಾಮದೇವನ ಮಂದಿರಕ್ಕೆ ಹೋದಳು. ಮಾಧವ ಉತ್ಸವದಲ್ಲಿ ಸೊಗಸಿನ ನೋಟಗಳನ್ನು ನೋಡುತ್ತ ಎತ್ತೆತ್ತಲೋ ಸುತ್ತಾಡಿದ. ಬಿಸಿಲೇರಿತು. ದಣಿವೂ ಆಗಿತ್ತು. ಹಾಗೆಯೇ ಹಾದಿಯ ಪಕ್ಕದಲ್ಲಿಯ

ಬಕುಲವೃಕ್ಷದ ಕೆಳಗೆ ಕುಳಿತ. ಮರದ ಸುತ್ತಲೂ ಹೂಗಳು ರಾಶಿರಾಶಿ ಯಾಗಿ ಸುರಿದಿದ್ದವು. ಹಾರವನ್ನು ಹೆಣೆಯುವುದರಲ್ಲಿ ಮಾಧವ ಒಳ್ಳೆಯ ನುರಪಡಿಯಾಗಿದ್ದ ಒಳ್ಳೆಯ ಹೂಗಳನ್ನು ಆಯ್ದುಕೊಂಡು ಮಾಲೆಯನ್ನು ಮಾಡುತ್ತ ಕುಳಿತ.

ಅಷ್ಟರಲ್ಲಿ ಮಾಲತಿ ಕಾಮದೇವನ ದರ್ಶನ ಮಾಡಿಕೊಂಡಳು. ಗೆಳತಿ-ದಾಸಿಯೊಡನೆ ದೇವಾಲಯದಿಂದ ಹೊರಬಂದಳು. ಅವರು ಅರಮನೆಗೆ ಹೋಗುವ ದಾರಿಯ ಪಕ್ಕದಲ್ಲಿಯೇ ಬಕುಲವೃಕ್ಷವಿತ್ತು. ಅಲ್ಲಿ ಮಾಧವ ಕುಳಿತಿದ್ದ; ಮುಕ್ಕಾಲು ಪಾಲು ಮಾಲೆಯನ್ನು ಮುಗಿಸಿದ್ದ. ಮಾಲತಿಯ ಗೆಳತಿಯರು ಅವನನ್ನು ನೋಡಿದರು—ರಾಜಕುಮಾರೀ ಈತನೇ ಅವನು ಇಂದು ನಿಜವಾಗಿಯೂ ಭಾಗ್ಯದ ದಿವಸ–ಬಾಲ್ಯಸಖಿ ಹೇಳಿದಳು.

ಮಾಧವನಿಗೆ ಈ ಮಾತು ಕೇಳಿತು. ಆದರೂ ಕೇಳದವನಂತೆ ನಟಿಸಿದ; ತಲೆಬಾಗಿಸಿಯೇ ಕುಳಿತಿದ್ದ. ಮಾಲತಿ ಮತ್ತು ಗೆಳತಿಯರ ಗುಂಪು ತೀರ ಸಮಿಪದಲ್ಲಿ ಸಾಗಿತ್ತು. ಮಾಧವ ಮೆತ್ತಗೆ ಕತ್ತೆತ್ತಿ ನೋಡಿದ; ಅದೇ ಹೊತ್ತಿಗೆ ಮಾಲತಿಯೂ ಆತನನ್ನು ನೋಡಿದಳು; ಎರಡೂ ಕಣ್ಣು ಕೂಡಿದವು. ಮಾಧವನ ಮೈಯಲ್ಲಿ ಮಿಂಚಿನ ಸಂಚಾರ ವಾಯಿತು. ಮಾಲತಿಯ ಕೆನ್ನೆಗಳು ನಾಚಿಕೆಯಿಂದ ಹವಳದ ಬಣ್ಣಕ್ಕೆ ಬದಲಿಸಿದುವು.

ಈ ಸ್ಥಿತಿಯಲ್ಲಿ ಅಲ್ಲಿಯೇ ಬಹಳ ವೇಳೆ ನಿಲ್ಲುವಂತಿರಲಿಲ್ಲ. ಬೇಗ ಬೇಗನೆ ಆನೆಯ ಅಂಬಾರಿಯಲ್ಲಿ ಕುಳಿತು ಮುಂದೆ ಸಾಗಿದಳು. ಗೆಳತಿ ಯರೂ ಆತನ ಕಣ್ಮರೆಯಾದರು.

ತಾನು ಕಂಡ ಆ ಸುಂದರ ತರುಣಿಯಾರು? ಆವಳು ತನ್ನ ಕಡೆಗೇಕೆ ನೋಡಿದಳು ? ನೋಡಿ ನಾಚಿದಳೇಕೆ ?....ಮಾಧವನ ತಲೆಯಲ್ಲಿ ವಿಚಾರ ತರಂಗಗಳು ತೆರಪಿಲ್ಲದೆ ಏಳತೊಡಗಿದವು. ಮಾಲೆಯನ್ನು

ಹೇಗ್ಗೋ ಹೇಗೋ ಕೊನೆಗೊಳಿಸಿದ; ತನ್ನ ಕೊರಳಲ್ಲಿ ಹಾಕಿಕೊಂಡ; ವಿಚಾರಮಗ್ನನಾಗಿ ಕುಳಿತ.

ತುಸು ಹೊತ್ತಿನಲ್ಲಿ ಮಾಲತಿಯ ಗೆಳತಿ ಲವಂಗಿಕೆ ಮಾಧವನ ಹತ್ತಿರ ಬಂದಳು; ನಮಸ್ಕಾರಪೂರ್ವಕವಾಗಿ ಕೇಳಿದಳು—ಪೂಜ್ಯರೇ, ನಿಮ್ಮ ಕೊರಳಲ್ಲಿಯ ಬಕುಲಮಾಲೆ ಬಹಳ ಸುಂದರವಾಗಿದೆ, ಒಂದೇ ಅಳತೆಯ ಮೇಲೆ ಹೂಗಳನ್ನು ಹೆಣೆಯುವ ಈ ಕಲಾಕುಶಲತೆ ಹೊಗಳುವಂತಿದೆ. ಇದನ್ನು ಅಮಾತ್ಯಕುಮಾರಿ ಬಹಳವಾಗಿ ಮೆಚ್ಚಿದ್ದಾಳೆ; ಅದನ್ನು ಮುಡಿಯಬೇಕೆನ್ನುತ್ತಾಳೆ. ದಯವಿಟ್ಟು ಕೊಟ್ಟರೆ ಬಹಳ ಉಪಕಾರವಾಗುವುದು.

" ನಿಮ್ಮ ಅಮಾತ್ಯ ಕುಮಾರಿ ಯಾರು? ಆಕೆಯ ಹೆಸರೇನು?" ಹಚ್ಚಡವನ್ನು ನೇಯುವುದಕ್ಕೆ ಎಳೆ ಸಿಕ್ಕರೆ ಸಾಕು, ಎನ್ನುವಂತಿತ್ತು ಮಾಧವನ ಮಾತಿನ ಧಾಟಿ.

" ಇದೀಗ ನಿಮ್ಮ ಇದಿರಿಗೆ ಹೋದವಳೇ ನಮ್ಮ ಒಡತಿ ಅಮಾತ್ಯ ಭೂರಿವಸುವಿನ ಪುತ್ರಿ. ಆಕೆಯ ಹೆಸರು ಮಾಲತಿ. ನಾನು ಅವರ ದಾಸಿ–ಲವಂಗಿಕಾ " ಸ್ವಲ್ಪದರಲ್ಲಿಯೇ ಮಾಲತಿಯ ಸಂಬಂಧದ ವಿವರಗಳ ಎಳೆಯನ್ನು ಕೊಟ್ಟಳು ಲವಂಗಿಕೆ.

ಲವಂಗಿಕೆಯ ಮಾತುಗಳಿಂದ ಮಾಧವನ ಆನಂದಕ್ಕೆ ಅಳತೆಯೇ ಉಳಿಯಲಿಲ್ಲ. ಅವಳ ಹೇಳಿಕೆಯ ಬುನಾದಿಯ ಮೇಲೆ ತನ್ನ ಕನಸಿನ ಚೆಂದಚೆಂದವಾದ ಮಂದಿರಗಳನ್ನು ಕಟ್ಟಹತ್ತಿದ. ಅದೇ ಕ್ಷಣದಲ್ಲಿಯೇ ಅವನ ಎದೆಯಲ್ಲಿ ಮಾಲತಿಯ ಪ್ರೇಮದ ಬೀಜವನ್ನು ಬಿತ್ತಿದಂತಾಯಿತು. ತನ್ನ ಕೊರಳ ಹಾರವನ್ನು ಆ ಕೂಡಲೆ ಲವಂಗಿಕೆಗೆ ಕೊಟ್ಟುಬಿಟ್ಟ ! ಮತ್ತು " ನಿಮ್ಮ ಒಡತಿಗೆ ಮೆಚ್ಚಿಕೆ ಆಯಿತೋ ಇಲ್ಲವೋ ಎಂಬುದನ್ನು ನನಗೆ ಮರೆಯದೆ ತಿಳಿಸಬೇಕು." ಎಂದು ಎಚ್ಚರಿಸಿದ.

" ಆಗಬಹುದು. ಬರುತ್ತೇನೆ !" ಲವಂಗಿಕೆ ಕೃತಜ್ಞತೆಯ ಭಾವವನ್ನು ಬೀರುತ್ತ ಸಾಗಿಹೋದಳು.

ಮಾಲತಿಯ ರೂಪ-ಗುಣಗಳ ಬಣ್ಣನೆಯನ್ನು ಕಾಮಂದಕಿ ಈ ಮೊದಲೇ ಮಾಧವನಿಗೆ ಹೇಳಿದ್ದಳು. ಆಗಿನಿಂದಲೂ ಅವಳನ್ನು ನೋಡ ಬೇಕೆಂಬ ಹಂಬಲು ಇದ್ದೇ ಇತ್ತು. ಇಂದು ಆ ಬಯಕೆಯ ಬಳ್ಳಿಗೆ ಕುಡಿಯೊಡೆದಿತ್ತು. ಅವಳ ರೂಪವನ್ನು ಕಂಡು ಮರುಳಾಗಿ ಬಿಟ್ಟ. ಆಕೆ ತನಗೆ ದೊರೆಯಬಹುದೇ ? ಈ ವಿಚಾರದಲ್ಲಿರುವಾಗ ಲವಂಗಿಕೆ ಬಂದು ಹಾರವನ್ನು ಬೇಡಿದ್ದಳು. ಆ ಮೇಲಂತೂ, ಮಾಲತಿಯ ಪ್ರೇಮವೂ ತನ್ನ ಮೇಲಿದೆ, ಎಂಬ ಮಾತಿನಲ್ಲಿ ಅವನಿಗೆ ಸಂಶಯ ಉಳಿಯಲಿಲ್ಲ. ತನ್ನ ಬಯಕೆಯ ಬಳ್ಳಿಗೆ ಹಣ್ಣಾಗುವ ಕಾಲ ದೂರ ವಿಲ್ಲ, ಎಂದೂ ಆತ ತಿಳಿದಿದ್ದ. ಆದರೆ, ಅದೆಲ್ಲ ಸಾಧ್ಯವಾಗುವುದು ಹೇಗೆ ? ಎಂದು ? ಮುಂತಾದ ವಿಚಾರಗಳಲ್ಲಿ ಅವನಿಗೆ ಊಟ ನಿದ್ದೆ ಯಾವುವೂ ಬೇಡವಾದುವು. ಹಗಲಿರುಳು ಮಾಲತಿಯ ವಿಚಾರವೇ ವಿಚಾರ !

೪. ಪ್ರಣಯಿಗಳ ಭಾವಚಿತ್ರಗಳು

ಮಾಧವನ ಚಿಂತೆಯ ಕಾರಣ ಮಕರಂದನಿಗೆ ತಿಳಿಯದು. ಅವನು ಸೌಮ್ಯವಾಗಿಯೇ ಮಿತ್ರನನ್ನು ಕೇಳಿದ—

" ಮಾಧವಾ, ಇದೇನಿದು ನಿನ್ನ ಅವಸ್ಥೆ ? ಆಲಸ್ಯದ ನಡಿಗೆ, ಶೂನ್ಯದೃಷ್ಟಿ, ಮಲಿನ ದೇಹ ! ಉಸಿರಾಟದ ವೇಗವಂತೂ ಹೇಳಿ ತೀರದು. ಇದಕ್ಕೆ ಕಾರಣವೇನು ? ಅಥವಾ ಉಕ್ಕಿಬರುವ ಯೌವನದ ಪ್ರಭಾವವೇ ಇದಾಗಿರಬೇಕು. ಬಹಳಮಾಡಿ, ಯಾರದೋ ಮಧುರ ಪ್ರೇಮದ ಸೆಳೆತಕ್ಕೆ ಸಿಕ್ಕಿರುವಿಯೆಂದು ತೋರುತ್ತದೆ. ನಿಜವೇ ?"

ಮಾಧವನ ಮುಖದಿಂದ ನಿಟ್ಟುಸಿರು ಹೊರಬಿತ್ತು !

" ಮಕರಂದಾ, ಅಂದಿನ ಮದನೋತ್ಸವದಲ್ಲಿ ಆ ಚಂದ್ರಮುಖಿ ನನ್ನ ಮನಸ್ಸನ್ನು ಬಲವಾಗಿ ಸೆಳೆದಿದ್ದಾಳೆ. ಅಂದಿನಿಂದ ನನ್ನಲ್ಲಿ ಲಜ್ಜೆ

ಯಿಲ್ಲ, ವಿವೇಕವಿಲ್ಲ. ಮುಂದೇನಾಗಬಹುದೋ ಎಂದು ತುಂಬಾ ಅಧೀರ ನಾಗಿದ್ದೇನೆ. ''

ಈ ಹೊತ್ತಿಗೆ ಮಾಧವನ ಸೇವಕ ಕಲಹಂಸ ಅಲ್ಲಿಗೆ ಬಂದ ತನ್ನ ಒಡೆಯರು ಯಾವುದೋ ಪ್ರೇಮಪ್ರಸಂಗವನ್ನು ಮಾತನಾಡುತ್ತಿರುವದು ಆತನಿಗೆ ಕೇಳಿಸಿತು. ಅದನ್ನು ಪೂರಾ ಕೇಳುವುದಕ್ಕಾಗಿ ಅಲ್ಲಿಯೇ ಮರೆಯಾಗಿ ನಿಂತ.

'' ಮಾಧವಾ, ಕಾಮನ ಕಾಟದಿಂದ ನಿನ್ನ ದೇಹ ತಳಮಳಿಸು ತ್ತಿದೆ. ಮೇಲೆ ಈ ಸುಡುಸುಡು ಬಿಸಿಲು. ಈ ಉಪವನದ ಗಿಡಬಳ್ಳಿ ಗಳ ನೆರಳಲ್ಲಿ ತುಸು ಹೊತ್ತು ಕುಳ್ಳಿರೋಣ '' ಮಕರಂದನೆಂದ.

ಗೆಳೆಯರು ತಣ್ಣೆಳಲಲ್ಲಿ ಕುಳಿತರು. ಮಾಧವನ ತಳಮಳಕ್ಕೆ ಅಲ್ಲಿಯೂ ಶಾಂತಿ ಸಿಕ್ಕಲಿಲ್ಲ. ಅವನ ಮುಖದಿಂದ ನಿಟ್ಟುಸಿರುಗಳು ಒಂದೇಸವನೇ ಹೊರಡುತ್ತಿದ್ದವು. ಗೆಳೆಯನ ಅವಸ್ಥೆಯಿಂದ ಮಕ ರಂದನಿಗೆ ಮತ್ತಿಷ್ಟು ಕೆಡಕೆನಿಸಿತು. ಮಾಧವನ ಮನಸ್ಸನ್ನು ಹೇಗಾ ದರೂ ರಮಿಸಬೇಕಾಗಿತ್ತು. ಅವನಿಗೆ ಬೇರೆ ವಿಷಯ ಬೇಕಾಗಿರಲಿಲ್ಲ ವೆಂದು ಗೊತ್ತು ಆತನಿಗೆ.

'' ಗೆಳೆಯಾ, ಹೀಗೆ ತಳಮಳಿಸುವದರಿಂದ ಏನಾಗುತ್ತಿದೆ ? ಅಂದು ನಡೆದುದನ್ನು ವಿವರವಾಗಿ ಹೇಳುವೆಯಾ ? ''

'' ಮಕರಂದಾ , ನಿನ್ನಿಂದ ಬಚ್ಚಿಡಬೇಕಾದ ಯಾವ ವಿಷಯವೂ ಇಲ್ಲ. ಅಂದಿನ ಉತ್ಸವದಲ್ಲಿ ಆ ಮನ್ಮಥನ ಗೆಲವಿನ ಬಾವುಟವನ್ನು–ಮಾಲತಿಯನ್ನು–ನೋಡಿದೆ. ಎಂತಹ ಚೆಲುವಿಕೆ ಅವಳದು ! ಚಂದ್ರ, ಅಮೃತ, ಕಮಲ ಮತ್ತು ಬೆಳುದಿಂಗಳನ್ನು ಒಟ್ಟುಗೂಡಿಸಿ ಕಾಮ ದೇವನೇ ಕೈಮುಟ್ಟ ಮಾಡಿರಬೇಕು ಅವಳನ್ನು........! ಆಕೆ ನನ್ನ ಸಮೀ ಪಕ್ಕೆ ಬಂದಾಗ ಲಜ್ಜೆಯಿಂದ ಅವಳ ಕೆನ್ನೆ ಕೆಂಪಾಗಿತ್ತು. ನನ್ನನ್ನೇ ತಿರುತಿರುಗಿ ನೋಡುತ್ತ ಆನೆಯನ್ನೇರಿ ಹೋದಳು. ತುಸು ಹೊತ್ತಿ

ನಲ್ಲಿಯೇ ಆಕೆಯ ಗೆಳತಿ ಬಂದು ನನ್ನ ಬಕುಲ ಮಾಲೆಯನ್ನು ತನ್ನ ಒಡತಿಗೆಂದು ಒಯ್ದಳು; ಮತ್ತು ಆಕೆ ಅವಳು ಯಾರು, ಎಂತು ಮುಂತಾಗಿ ಎಲ್ಲವನ್ನು ತಿಳಿಸಿದಳು...."

ಮಾಧವ ಸ್ವಲ್ಪದರಲ್ಲಿಯೇ ತನ್ನ ಪ್ರಣಯ ಪ್ರಕರಣವನ್ನು ತಿಳಿಸಿದ.

ಮಕರಂದ, ಕಾಮಂದಕಿಯ ಮಾತಿನಿಂದ ಮಾಲತಿಯ ಸೌಂದರ್ಯ ಸದ್ಗುಣಗಳನ್ನು ಅರಿತಿದ್ದ. ಅಂಥವಳನ್ನು ಮಾಧವ ಬಯಸುತ್ತಿದ್ದುದು ಅಯೋಗ್ಯವಾಗಿರಲಿಲ್ಲ. ಆದರೆ, ಅದೇ ಮಾಲತಿಯನ್ನು ಅರಸನ ಸರದಾರ ನಂದನ ಬಯಸುತ್ತಿದ್ದ. ಇದು ಕೂಡ ಮಕರಂದನಿಗೆ ತಿಳಿದಿತ್ತು. ಈ ಕಂಟಕವನ್ನು ದಾಟಿ ಮಾಲತೀ-ಮಾಧವರ ಮದುವೆಯಾಗಬಹುದೇ? ಈ ತೊಡಕನ್ನು ಬಿಡಿಸುವುದು ಹೇಗೆ ? ಮಕರಂದ ಈ ವಿಚಾರದಲ್ಲಿ ಕೆಲ ಹೊತ್ತು ಸುಮ್ಮನೆ ಕುಳಿತ. ಕೊನೆಗೆ ಎಲ್ಲವೂ ದೈವೇಚ್ಛೆ ಎಂದ.

" ನಿಜ; ಮಕರಂದಾ, ಕಾರ್ಯ ಕಾರಣಗಳ ಸಂಬಂಧವಿಲ್ಲದೆ ನಾನು ಮಾಲತಿಯ ಪ್ರೇಮದ ಪಾಶದಲ್ಲಿ ಸಿಲುಕಿರುವೆ. ಯಾವ ಪೂರ್ವ ಜನ್ಮದ ಋಣ ಸಂಬಂಧವೋ ತಿಳಿಯದು. ಎಲ್ಲವೂ ದೈವದ ಇಚ್ಛೆಯನ್ನೇ ಅವಲಂಬಿಸಿದೆ." ಒಪ್ಪಿಗೆಯನ್ನು ಆಡಿದ ಮಾಧವ.

ಕಲಹಂಸ ಮರೆಯಲ್ಲಿಯೇ ಇದನ್ನೆಲ್ಲ ಕೇಳುತ್ತಲೇ ಇದ್ದ. ಮಾಲತಿ ತನ್ನ ತಳಮಳ ಶಾಂತಪಡಿಸಲು ಮಾಧವನ ಭಾವಚಿತ್ರವನ್ನು ತೆಗೆದಿದ್ದಳು. ಅದು ಕಲಹಂಸನ ಕೈಯಲ್ಲಿತ್ತು-ಮಾಲತಿಯಂತೆಯೇ ಮಾಧವನೂ ತಳಮಳಿಸುತ್ತಿದ್ದುದು ಅವನಿಗೆ ತಿಳಿಯಿತು. ಇದೊಂದು ಅನುಕೂಲ ಸಮಯವೇ ಎಂದುಕೊಂಡ; ತನ್ನ ಕೈಯಲ್ಲಿಯ ಚಿತ್ರವನ್ನು ಆ ಗೆಳೆಯರೆದುರಿಗೆ ಹಿಡಿದ,

ಅವರಿಬ್ಬರೂ ಆ ಚಿತ್ರವನ್ನು ನೋಡಿದರು; ಬೆರಗಾದರು. ಅದು ಮಾಧವನದೇ ಭಾವಚಿತ್ರ.

" ಮಾಧವಾ, ನೀನೇ ಸುದೈವಿ. ಮಾಲತಿಯೂ ನಿನ್ನಂತೆಯೇ ಕಾಮದೇವನ ಕೈವಶವಾಗಿದ್ದಾಳೆ. ಕಲಹಂಸಾ, ಈ ಚಿತ್ರವನ್ನು ಬಿಡಿಸಿದವರು ಯಾರು ? " ಮಕರಂದ ಕೇಳಿದ.

"ಮಾಧವನ ಹೃದಯವನ್ನು ಸೆಳೆದ ಸುರಸುಂದರಿ ! " ಕಲಹಂಸನ ಮಾತಿನಿಂದ ಮಾಧವನ ಪ್ರೇಮವನ್ನು ಮತ್ತಿಷ್ಟು ಕೆಣಕಿದಂತಾಯಿತು; ಮಕರಂದನ ಕುತೂಹಲ ಕೆರಳಿತು.

"ಈ ಚಿತ್ರ ನಿನ್ನಲ್ಲಿ ಹೇಗೆ ಬಂದಿತು ? " ಮತ್ತೆ ಮಕರಂದನ ಪ್ರಶ್ನೆ.

"ಬೌದ್ಧ ವಿಹಾರದ ಪರಿಚಾರಿಕೆ ಮಂದಾರಿಕೆಯಲ್ಲಿ ಈ ಚಿತ್ರವಿತ್ತು. ಮಾಲತಿಯ ಗೆಳತಿ ಲವಂಗಿಕೆಯಿಂದ ಆ ಚಿತ್ರವನ್ನು ಪಡೆದಳಂತೆ ಮಂದಾರಿಕೆ. ಅವಳಿಂದ ನನ್ನ ಕಡೆಗೆ ಬಂದಿದೆ." ಕಲಹಂಸನ ಉತ್ತರ.

ಮಕರಂದನಿಗೆ ಹಿಡಿಸಲಾರದಷ್ಟು ಹಿಗ್ಗಾಯಿತು :

" ಮಾಧವಾ, ನೀನಿನ್ನು ಚಿಂತೆ ಮಾಡಬೇಕಾಗಿಲ್ಲ. ನಿನ್ನ ಕಣ್ಬೆಳಕಾಗಿರುವ ಮಾಲತಿ ನಿನ್ನನ್ನೇ ಪ್ರೀತಿಸುತ್ತಾಳೆ. ಕುಲವಧುವಾದವಳು ಯಾವಾಗಲೂ ಒಬ್ಬನನ್ನೇ ಪ್ರೀತಿಸುತ್ತಾಳೆ; ಅವನಿಗೆ ತನ್ನ ಹೃದಯ-ಶರೀರಗಳನ್ನು ಅರ್ಪಿಸುತ್ತಾಳೆ. ನಿಮ್ಮಿಬ್ಬರ ಮದುವೆಯಾಗುವುದರಲ್ಲಿ ಸಂಶಯವೇ ಇಲ್ಲ. ಈಗ ಹೀಗೆ ಮಾಡು : ಮಾಲತಿಯ ಚಿತ್ರವನ್ನು ಈ ಚಿತ್ರಕ್ಕೆ ಹೊಂದಿಯೇ ಬಿಡಿಸಿಬಿಡು." ಪ್ರೇಮದ ಬೀಜವನ್ನು ಮೊಳೆಸುವ ರೀತಿಯಲ್ಲಿ ಮಕರಂದ ಮಾತನಾಡಿದ.

ಮಾಧವನ ಕಲಾ ಕುಶಲತೆಗೆ ಕುಂಚ ಬಣ್ಣಗಳ ಅವಶ್ಯಕತೆ ಇರಲಿಲ್ಲ. ಬಳಿಯಲ್ಲಿದ್ದ ಬಳ್ಳಿಯ ಎಲೆ ಹೂಗಳ ರಸದಿಂದ ಮಾಲತಿಯ ಸಜೀವ ಚಿತ್ರವನ್ನು ಕ್ಷಣಾರ್ಧದಲ್ಲಿ ಬರೆದುಬಿಟ್ಟ ! ಮಾಧವನ ಜಾಣ್ಮೆಯನ್ನು ಎಲ್ಲರೂ ಮನವಾರೆ ಹೊಗಳಿದರು.

ಇಷ್ಟರಲ್ಲಿ ಮಂದಾರಿಕೆ ಅಲ್ಲಿಗೇ ಬಂದಳು; ಕಲಹಂಸ ಕದ್ದು

ತಂದ ಭಾವಚಿತ್ರನನ್ನು ಬೇಡಿದಳು. ಮಂದಾರಿಕೆ–ಕಲಹಂಸರಲ್ಲಿ ಪ್ರೇಮ ಬೆಳೆದು ಬಂದಿತ್ತು. ತನ್ನ ಪ್ರಿಯಕರನನ್ನು ಕಾಣುವುದಕ್ಕೆ ಈ ಚಿತ್ರದ ಬೇಡಿಕೆ ಒಂದು ನೆವವಾಗಿತ್ತು ಎಂದರೂ ಸರಿಯೇ. ಆದರೆ ಲವಂಗಿಕೆಗೆ ಆ ಚಿತ್ರವನ್ನು ತೀವ್ರವೇ ತಿರುಗಿಕೊಡುವುದು ಅವಶ್ಯವಾಗಿತ್ತು ಮಂದಾರಿಕೆಗೆ. ಏಕೆಂದರೆ, ಮಾಲತಿ ಯಾವಾಗಲೂ ಇದಿರಿಗೇ ಇಟ್ಟು ಕೊಂಡಿರುತ್ತಾಳೆ, ಎಂದು ಹೇಳಿದ್ದಳು ಲವಂಗಿಕೆ. ಅಮಾತ್ಯ ಕುಮಾರಿಯ ಜೀವಜೀವಾಳವಾದ ಮಾಧವನ ಚಿತ್ರವನ್ನು ಕಣ್ಮರೆಮಾಡುವದು ದೊಡ್ಡ ತಪ್ಪು ಎನಿಸಬಹುದಾಗಿತ್ತು.

"ಕಲಹಂಸಾ, ಬೇಗನೆ ಕೊಡು ಆ ಭಾವಚಿತ್ರವನ್ನು" ಮಂದಾರಿಕೆ ಗಡಿಬಿಡಿ ಮಾಡಿದಳು.

ಭಾವಚಿತ್ರ ಮಂದಾರಿಕೆಯ ಕೈಸೇರಿತು. ಅದರ ಬೆನ್ನುಮಗ್ಗಲು ಮಾಲತಿಯ ಭಾವಚಿತ್ರವನ್ನು ಬರೆಯಲಾಗಿತ್ತು ಅದರ ಕೆಳಗೇ.

"ಜಗತ್ತಿನಲ್ಲಿ ಅನೇಕಾನೇಕ ಚೆಲುವಿನ ಒಡವೆಗಳಿರಬಹುದು. ಆದರೆ, ಬೆಳುದಿಂಗಳಂತೆ ನನ್ನ ಮನಸ್ಸನ್ನು ಅರಳಿಸುವ ಆನಂದಪಡಿಸುವ ವಸ್ತುವೆಂದರೆ ಇದೊಂದೇ!" ಎಂದು ಬರೆಯಲಾಗಿತ್ತು.

ಮಂದಾರಿಕೆ ಹುಸಿಮುನಿಸಿನಿಂದ ಕೇಳಿದಳು—

"ಈ ಚಿತ್ರವನ್ನು ಬಿಡಿಸಿದವರು ಯಾರು? ಈ ಶ್ಲೋಕವನ್ನು ಬರೆದಿರುವುದೇಕೆ?"

"ಇದನ್ನು ಬಿಡಿಸಿದವನು ಕಲಾಕುಶಲ ಮಾಧವ. ಶ್ಲೋಕದಲ್ಲಿ ತನ್ನ ಹೃದಯವನ್ನೇ ತೆರೆದು ತೋರಿಸಿದ್ದಾನೆ." ಕಲಹಂಸ ನಕ್ಕ.

"ಬ್ರಹ್ಮದೇವನ ಶೃಂಗಾರ ಸೃಷ್ಟಿ ಇಂದಿಗೆ ಸಫಲವಾಯಿತು. ಮಹಾನುಭಾವರೇ, ನನಗೆ ಅಪ್ಪಣೆ ಕೊಡಿರಿ. ಈ ಆನಂದದ ಸುದ್ದಿಯನ್ನು ಗೆಳತಿ ಲವಂಗಿಕೆಗೆ ತಿಳಿಸುತ್ತೇನೆ." ಹಿಗ್ಗಿನ ಹೊನಲನ್ನು ಹರಿಸುತ್ತ ಮಂದಾರಿಕೆ ಮುಂದಾದಳು.

"ಮಂದಾರಿಕೇ ನಾನೂ ನಿನ್ನ ಸಂಗಡವೇ ಬರಬಹುದೇ? ಒಬ್ಬೊಂಟಿಗಳಾಗಿ ದಾರಿಯಲ್ಲಿ ಹೋಗುತ್ತಿರುವಾಗ...." ಕಲಹಂಸನ ಮಾತು ಅರ್ಧಕ್ಕೇ ನಿಂತಿತು.

"ಒಂಟಿಗಳಾಗಿ ಹೋಗುತ್ತಿರುವದರಿಂದಲೇ ನೀನು ಬರುವ ಅವಶ್ಯಕತೆಯಿಲ್ಲ" ನಗುನಗುತ್ತ ಮಂದಾರಿಕೆ ಕಣ್ಮರೆಯಾಗಿಬಿಟ್ಟಳು.

ಮಾಧವ ಮಕರಂದರ ಮನಸ್ಸಿಗೆ ಈಗ ಎಷ್ಟೋ ಸಮಾಧಾನ ವಾಗಿತ್ತು. ಬಿಸಿಲಿನ ತಾಪವೂ ಕಡಿಮೆಯಾಗಿತ್ತು. ಭವಿಷ್ಯದಲ್ಲಿ ಹಂಬಲು ಹಣ್ಣಾಗುವ ಆಸೆಯೂ ಅವರಲ್ಲಿ ಮೂಡಿತ್ತು. ಈಗಂತೂ ಮಾಧವನಿಗೆ ಎಲ್ಲಿ ನೋಡಿದಲ್ಲಿ ಮಾಲತಿ, ಮಾಲತಿ, ಮಾಲ-ತಿ!

ಅದೇ ವಿಷಯವನ್ನು ಮಾತಾಡುತ್ತ ಅವರಿಬ್ಬರೂ ವಿದ್ಯಾಲಯಕ್ಕೆ ಹೊರಟರು.

ಮಂದಾರಿಕೆ ಆ ಭಾವಚಿತ್ರವನ್ನು ಲವಂಗಿಕೆಗೆ ಕೊಟ್ಟಳು. ಅವಳ ಕೈಯಿಂದ ಅದು ಮಾಲತಿಯ ಸನ್ನಿಧಿಯನ್ನು ಸೇರಿತು. ಆಗ ಮಾಲತಿಗೆ ಮುಗಿಲು ಮೂರೇಗೇಣು ಉಳಿದಿರಬೇಕು. ಏಕೆಂದರೆ, ಅವಳ ಪ್ರೇಮಕ್ಕೆ ತಕ್ಕ ಉತ್ತರ ದೊರಕಿತ್ತು ಮಾಧವನಿಂದ. ಆದರೆ, ಈ ಚಿತ್ರದಲ್ಲಿ ಪ್ರೇಮಿಗಳ ಸಮ್ಮಿಳನವಾಗಿತ್ತು; ನಿಜ. ಅದರಂತೆಯೇ ಸತ್ಯಸೃಷ್ಟಿಯಲ್ಲಿಯೂ ಆಗಬಹುದೇ? ಈ ಸಂದೇಹ ಅವಳಿಗೆ ತಳಮಳವನ್ನು ಹುಟ್ಟಿಸುತ್ತಿತ್ತು. ನಂದನ ಸರದಾರನ ಬೇಡಿಕೆ ಅವಳ ಹೃದಯವನ್ನು ಹುಳುವಿನಂತೆ ಕೊರೆಯುತ್ತಿತ್ತು. ಈ ಅಡೆತಡೆಯನ್ನು ಕಳೆಯುವುದಕ್ಕೆ ದೇವನನ್ನು ಮೊರೆಹೋಗುವುದಲ್ಲದೆ, ಬೇರೆ ವಿಧಿಯೇ ಇರಲಿಲ್ಲ.

೫. ಮಾಲತಿಯ ಮನಸ್ಸಿನ ಹೊಯ್ದಾಟ

ಮರುದಿವಸ ಕಾಮಂದರೆ ಭೂರಿವಸು ಮಂತ್ರಿಯ ಮನೆಗೆ ಬಂದಳು. ಮಾಲತಿ ಆಕೆಯನ್ನು ವಂದಿಸಿದಳು. "ಮಗು, ನಿನ್ನ ಇಷ್ಟಾರ್ಥ ಈಡೇರಲಿ!" ಕಾಮಂದರೆ ಶುಭಾಶೀರ್ವಾದ ಮಾಡಿದಳು.

" ಭಗವತಿ, ತಮ್ಮ ಆರೋಗ್ಯ ಸರಿಯಾಗಿದೆ ಅಲ್ಲವೆ?" ಮಾಲತಿ.

" ಮಗಳೇ, ನಮ್ಮಂತಹ ಸನ್ಯಾಸಿನಿಯರು ಸಂಸಾರದ ಮಾಯಾ ಜಾಲದಲ್ಲಿ ಸಿಕ್ಕುಬೀಳಬಾರದು. ಆದರೆ ನಿಮ್ಮಂಥ ಮಕ್ಕಳ ಸುಖಕ್ಕಾಗಿ ಈ ಚಿಂತೆಯ ಚಕ್ರದಲ್ಲಿ ತಿರುಗಬೇಕಾಗಿದೆ. ಅರಸನ ಅಪ್ಪಣೆಯ ಇದಿರಿಗೆ ಭೂರಿವಸು ಮಂತ್ರಿಗಳು ತಲೆಬಾಗಿಸಲೇ ಬೇಕಾಗಿದೆ. ಇಲ್ಲವಾದರೆ, ನಂದನನಂಥ ಬೆಳೆದ ವಯಸ್ಸಿನ ಮತ್ತು ಬುದ್ಧಿಯಿಲ್ಲದ ಸರದಾರನಿಗೆ ತನ್ನ ಹೊಟ್ಟೆಯ ಕರುಳನ್ನು ಕೊಡಲು ಒಪ್ಪುತ್ತಿರಲಿಲ್ಲ! " ಕಾಮಂದಕಿ ನಿಟ್ಟುಸಿರುಬಿಟ್ಟಳು.

" ಭಗವತಿ, ಅಪ್ಪಾಜಿ ಇಷ್ಟೊಂದು ಕೈಸೋತು ಕುಳಿತರೇ ? ತಮ್ಮ ಒಬ್ಬಳೇ ಒಬ್ಬ ಮಗಳು ಬದುಕಿರುವವರೆಗೂ ಕಣ್ಣೀರಿನ ಕಡಲಲ್ಲಿ ಮುಳುಗುವಳೆಂಬ ಕಲ್ಪನೆಯಿಲ್ಲವೇ ಅವರಿಗೆ ? " ಮಾಲತಿ ಕಣ್ಣೀರು ಕೂಡಿ ಗದ್ಗದಿಸಿದಳು.

" ಮಗಳೇ, ಈ ರಾಜಕಾರಣಪಟುಗಳಿಗೆ ಅಧಿಕಾರದ ಅಬ್ಬರದ ಹೊರತು ಮಕ್ಕಳ ಸುಖದುಃಖಗಳು ಕಣ್ಣಿಗೆ ಕಾಣುವದಿಲ್ಲ. ಇಂತಹ ಪ್ರಸಂಗದಲ್ಲಿ ಮಗಳ ಮನೋಧೈರ್ಯವೇ ಆಕೆಯನ್ನು ಕಾಪಾಡಬಲ್ಲದು." ಕಾಮಂದಕಿ.

" ಎಂದರೆ ? ತಂದೆ ತನ್ನ ಕರ್ತವ್ಯವನ್ನು ತಪ್ಪಿಸಿದರೆ, ಮಗಳೇ ತನಗೆ ಅನುರೂಪನಾದ ವರನನ್ನು ಆಯ್ದುಕೊಳ್ಳಬಹುದೇ ? ತಂದೆಯ ಬಲವಂತಕ್ಕೆ ಇದಿರಾಗಿ ತನ್ನ ಮನದನ್ನನ ಕೈಹಿಡಿಯ ಬಹುದೇ ? " ಮಾಲತಿ ಯಾವುದೋ ಧೈರ್ಯದಿಂದ ಕೇಳಿದಳು.

" ನನ್ನ ಅಭಿಪ್ರಾಯದಲ್ಲಿ–ತಂದೆ ಅನುಕೂಲವಿರಲಿ, ಇಲ್ಲದೆ ಇರಲಿ ಕನ್ಯೆಯ ವಿವಾಹ ಸ್ವಾತಂತ್ರ್ಯ ಸಂಪೂರ್ಣವಾಗಿ ಕನ್ಯೆಯದೇ. ಹಾಗೆಂದೇ ಶಕುಂತಲೆ ದುಷ್ಯಂತನೊಡನೆ ಗಾಂಧರ್ವ ವಿವಾಹ ಮಾಡಿಕೊಂಡಳು; ದೇವಯಾನಿ ಯಯಾತಿಯನ್ನು, ವಾಸವದತ್ತೆ ಉದಯನ ರಾಜನನ್ನು

ವರಿಸಿದರು. ಪ್ರಣಯಿಗಳು ಸ್ವಪ್ರಯತ್ನ ಸಾಹಸಗಳಿಂದಲೇ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಬೇಕು." ಕಾಮಂದಕಿಯ ಮಾತಿನಲ್ಲಿ ಮಾಲತಿಗೆ ಹೊಸದೊಂದು ಹಾದಿಯ ಸೂಚನೆಯಿತ್ತು.

ಈ ಸೂಚನೆ ಭೂರಿವಸುವಿಗೂ ಮೆಚ್ಚುಗೆಯದೆಂದು ಕಾಮಂದಕಿಗೆ ತಿಳಿದಿತ್ತು. ಅವನು ಅರಸನ ಅಪ್ಪಣೆಯ ಬೆದರಿಕೆಗೆ ತಲೆಬಾಗಿದ್ದ; ಹೊರತಾಗಿ, ಮಗಳನ್ನು ಮಂಗನ ಕೊರಳಲ್ಲಿ ಕಟ್ಟಿ ತಾನು ಮಹಾಮಂತ್ರಿಯಾಗಿ ಮೆರೆದಾಡಬೇಕೆಂದು ಬಯಸಿರಲಿಲ್ಲ. ಮಗಳು ತಾನಾಗಿ ಮಾಧವನೊಡನೆ ಸ್ವಯಂವರ ಮಾಡಿಕೊಳ್ಳಬೇಕೆಂಬುದೇ ಆತನ ಉದ್ದೇಶವಾಗಿತ್ತು. ಇದರಿಂದ ಮಗಳ ಕಲ್ಯಾಣವೂ ಆಗುವುದು; ತಾನೂ ಅಪವಾದದಿಂದ ದೂರವಾಗಬಹುದು! ಈ ಒಳಗುಟ್ಟನ್ನು ತಿಳಿದೇ ಕಾಮಂದಕಿ ಮಾಲತಿಗೆ ಸಾಹಸದ ಹಾದಿಯನ್ನು ಹಾಕಿಕೊಟ್ಟಿದ್ದಳು.

ಇವರ ಮಾತು ನಡೆದಾಗ ಕಾಮಂದಕಿಯ ಶಿಷ್ಯೆ **ಬುದ್ಧರಕ್ಷಿತೆ** ಅಲ್ಲಿಗೆ ಬಂದಳು;—ಮಾಧವನ ಮೈಯ್ಯಲ್ಲಿ ಚೆನ್ನಾಗಿಲ್ಲ. ತಮ್ಮನ್ನು ಕರೆಯುತ್ತಿದ್ದಾರೆ ಎಂದು ಹೇಳಿದಳು.

"ಭಗವತಿ, ಆ ಮಾಧವ ಯಾರು? ತಾವು ಆತನ ಮೇಲೆ ಎಷ್ಟೊಂದು ಮಮತೆ ಮಾಡುತ್ತೀರಲ್ಲ!" ಲವಂಗಿಕೆ ಏನೂ ಅರಿಯದವಳಂತೆ ಕೇಳಿದಳು.

ಕಾಮಂದಕಿ ಮಾಧವನ ಕುಲ - ರೂಪ - ಶೀಲ - ಶೌರ್ಯಗಳನ್ನು ಮತ್ತೊಮ್ಮೆ ಮನಸೆಳೆಯುವಂತೆ ಬಣ್ಣಿಸಿದಳು. ಹಾಗೆಯೇ, ಆತನ ತಂದೆ ದೇವರಾತ, ಭೂರಿವಸು, ತಾನು ಮತ್ತು ಸೌದಾಮಿನಿ ವಿದ್ಯಾಲಯದಲ್ಲಿ ಕಲಿಯುತ್ತಿದ್ದ ಸವಿನೆನಹುಗಳನ್ನು ತಿಳಿಸಿದಳು. ತಮ್ಮೆಲ್ಲರ ಅಗಲಿಕೆಯ ದಿನದ ಮಾತುಕತೆಗಳ ವಿವರಗಳನ್ನು ಹೇಳಿದಳು.

ಕಾಮಂದಕಿ ಮಠಕ್ಕೆ ತೆರಳಿದಳು. ಮಾಲತಿಯ ಮನಸ್ಸು ಕಾಯ್ದ ಎಣ್ಣೆಯಂತೆ ಹೊಯ್ದಾಡಹತ್ತಿತು. ಒಂದು ಕಡೆಗೆ ಮಾಧವನ ಮೇಲಿನ

ಪ್ರೇಮ, ಮತ್ತೊಂದು ಕಡೆಗೆ ತಂದೆಯ ಮೇಲಿನ ಸಂಕಟ! ಇವುಗಳಲ್ಲಿ ಯಾವುದನ್ನು ಹಿಡಿಯಬೇಕು? ಯಾವುದನ್ನು ಬಿಡಬೇಕು? ಅತ್ತ ಕೆರೆ, ಇತ್ತ ಬಾವಿ; ಅತ್ತ ಹುಲಿ, ಇತ್ತ ದರಿ! ನಿಟ್ಟುಸಿರಿನ ಹೊರತು ಅವಳ ಬಾಯಿಂದ ಬೇರೆ ಶಬ್ದಗಳೇ ಹೊರಡದಾದವು.

೬. ಹುಲಿಯ ಹಾವಳಿಯ ಹುಯಿಲು

ತಿಂಗಳೊಪ್ಪೊತ್ತಿನಲ್ಲಿ ಕೃಷ್ಣಚತುರ್ದಶೀ ತಿಥಿ ಬಂದಿತು. ಅಂದು ಪದ್ಮಾವತೀನಗರದ ನೆರೆಯ ಶಿವದೇವಾಲಯದಲ್ಲಿ ನರನಾರಿಯರ ಜಾತ್ರೆಯೇ ನೆರೆಯುತ್ತಿತ್ತು. ದೇವಾಲಯದ ನೆರೆಯಲ್ಲಿಯೇ ಬಗೆ ಬಗೆಯ ಹೂಗಳ ಗಿಡಬಳ್ಳಿಗಳಿದ್ದವು. ಭಕ್ತರು ಆ ಹೂಗಳನ್ನು ತಂದು ದೇವದೇವನಿಗೆ ಏರಿಸುತ್ತಿದ್ದರು; ಆತನಿಂದ ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಳ್ಳುತ್ತಿದ್ದರು. ಸುಮಂಗಲೆಯರು ಶಿವಲಿಂಗವನ್ನು ಭಕ್ತಿಯಿಂದ ಪೂಜಿಸಿದರೆ, ಅವರ ಸೌಭಾಗ್ಯ ಅಖಂಡವಾಗಿ ಉಳಿಯುವದೆಂಬ ವಾಡಿಕೆ ಇತ್ತು. ಅವಿವಾಹಿತ ತರುಣಿಯರು ಅನುರೂಪ ಪತಿ ದೊರಕಲಿ, ಎಂದು ಶಿವಮೂರ್ತಿಯನ್ನು ಸುಮನಗಳಿಂದ ಸಿಂಗರಿಸುತ್ತಿದ್ದರು.

ಮಾಲತಿ ಮತ್ತು ಆಕೆಯ ತಾಯಿ ಎಂದಿನಂತೆ ಶಿವದೇವಾಲಯಕ್ಕೆ ಹೋಗಿದ್ದರು. ಕಾಮಂದರೆಯ ಹೇಳಿಕೆಯಂತೆ, ಅದೇ ಸಾಯಂಕಾಲ ಮಾಧವನೂ ದೇವಾಲಯಕ್ಕೆ ಬಂದಿದ್ದ; ನೆರೆಯಲ್ಲಿದ್ದ ಅಶೋಕ ವೃಕ್ಷದ ಕೆಳಗೆ ಕುಳಿತಿದ್ದ. ಕಾಮಂದರೆ ತುಸುಹೊತ್ತಿನಲ್ಲಿ ಅಲ್ಲಿಗೆ ಆಗಮಿಸಿದಳು. ಆಕೆ ಮಾಲತಿಯನ್ನು ಕುರಿತು—

"ಮಗಳೇ, ಹೋಗು; ತೋಟದಲ್ಲಿ ಹೂಗಳನ್ನು ಕೊಯ್ದುಕೊಂಡು ಬಾ. ಭಕ್ತಿಯಿಂದ ಶಂಕರನನ್ನು ಪೂಜಿಸು. ನಿನ್ನ ಇಷ್ಟಾರ್ಥಗಳೆಲ್ಲ ನೆರವೇರುತ್ತವೆ." ಎಂದು ಹೇಳಿದಳು.

ಮಾಲತಿ ಲವಂಗಿಕೆಯರು ಉದ್ಯಾನದಲ್ಲಿ ಅತ್ತಿತ್ತ ತಿರುಗಾಡುತ್ತ ಹೂಗಳನ್ನು ಕೊಯ್ಯುತ್ತಿದ್ದರು. ಕಾಮಂದರೆ ಅಲ್ಲಿಗೆ ತಾನಾಗಿ ಬಂದಳು.

" ಮಗಳೇ, ನಿನಗೆ ಬಹಳ ದಣಿವಾದಂತೆ ತೋರುತ್ತದೆ. ಬಾ; ಇಲ್ಲಿ ಕಲ್ಲು ಹಾಸಿಗೆಯ ಮೇಲೆ ಕುಳ್ಳಿರೋಣ" ಎಂದಳು. ಆಮೇಲೆ.......

" ಮಗು ಮಾಲತೀ, ಮಾಧವನ ಪೂರ್ಣ ಚರಿತ್ರವನ್ನು ನಿನಗೆ ಸ್ವಲ್ಪದರಲ್ಲಿಯೇ ತಿಳಿಸಿರುವೆ. ಅವನು ಮದನೋತ್ಸವದಲ್ಲಿ ನಿನ್ನನ್ನು ನೋಡಿದನಂತೆ. ಅಂದಿನಿಂದ ನಿನ್ನ ಚಿಂತೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದಾನೆ. ಊಟವಿಲ್ಲ, ನಿದ್ದೆಯಿಲ್ಲ, ನೀರಡಿಕೆಯಿಲ್ಲ. ಹಗಲಿರುಳೂ ನಿಟ್ಟುಸಿರು ಬಿಡುವುದೊಂದೇ ಅವನ ಕೆಲಸವಾಗಿದೆ. ಯಾರೊಡನೆಯೂ ಮಾತಿಲ್ಲ, ಕತೆಯಿಲ್ಲ. ಅವನ ಅವಸ್ಥೆ ಮುಂದೇನಾದೀತೋ ತಿಳಿಯದಾಗಿದೆ."

" ಮಾಲತೀ ಗೆಳತಿಯೂ ಅದೇ ಉತ್ಸವದಲ್ಲಿ ಆತನನ್ನು ಕಂಡಳು. ಅಂದಿನಿಂದ ಈಕೆಯ ಸ್ಥಿತಿಯೂ ಹಾಗೆಯೇ ಆಗಿದೆ. ಭಗವತಿ, ಇವರಿಬ್ಬರ ಮದುವೆಯಾಗದಿದ್ದರೆ ಮುಂದೇನಾದೀತೋ ನನಗೂ ಹೆದರಿಕೆ. ಭಗವತಿ, ಈ ಪ್ರಸಂಗದಲ್ಲಿ ನೀವೇ ತಕ್ಕ ಹಂಚಿಕೆಯನ್ನು ಹುಡುಕಲೇಬೇಕು." ಲವಂಗಿಕೆ ವಿನಯದಿಂದ ಬಿನ್ನವಿಸಿಕೊಂಡಳು.

ಮಾಧವನಿಗೆ ಇವೆಲ್ಲ ಮಾತುಗಳೂ ಕೇಳುತ್ತಿದ್ದುವು. ಈಕೆಯ ಸ್ಥಿತಿಯೂ ಹೀಗೆಯೇ ಆಗಿದೆ, ಎಂದು ಕೇಳಿದಾಗ ಅವನ ಹಿಗ್ಗು ಹಿರಿದಾಗಿತ್ತು. 'ಇವರಿಬ್ಬರ ಮದುವೆಯಾಗದಿದ್ದರೆ....' ನುಡಿಯಿಂದ ಮನಸ್ಸು ಭಯದಿಂದ ಮುದುಡಿತು.

ಅಷ್ಟರಲ್ಲಿ ಚೀರಾಟದ ದನಿಯೊಂದು ಕೇಳಿತು.

"ಅಶೋಕವನದಲ್ಲಿಯ ಜನಗಳೇ ಜೋಕೆ, ಜೋಕೆ! ಪಂಜರದಿಂದ ಹುಲಿಯೊಂದು ತಪ್ಪಿಸಿಕೊಂಡು ಹಾವಳಿಮಾಡುತ್ತ ಇತ್ತಲೇ ಬರುತ್ತಲಿದೆ, ಕೆಲವರನ್ನು ಗಾಯಗೊಳಿಸಿದೆ. ಎತ್ತು ಕುದುರೆಗಳನ್ನು ಕೊಂದು ಹಾಕಿದೆ. ರಾಜಮಾರ್ಗವೆಲ್ಲ ರಕ್ತಮಯವಾಗಿದೆ. ಎಚ್ಚರ, ಎಚ್ಚರ! ಹುಲಿಯ ಹಾವಳಿಯಿಂದ ತಪ್ಪಿಸಿಕೊಳ್ಳಿರಿ! ಹುಲಿ, ಹುಲಿ, ಹುಲಿ!"

ಶಿವದೇವಾಲಯದ ಉಪವನದಲ್ಲಿ ಪ್ರಾಣಿಸಂಗ್ರಹಾಲಯವಿತ್ತು. ಅವುಗಳಲ್ಲಿ ಹುಲಿ, ಚಿರತೆ ಮೊದಲಾದ ಹಿಂಸ್ರ ಪಶುಗಳು ಇದ್ದವು. ಹುಲಿಯೊಂದು ಪಂಜರವನ್ನು ಮುರಿದು ಹೊರಬಿದ್ದಿತ್ತು; ಎತ್ತ ಬೇಕತ್ತ ಜಿಗಿಯುತ್ತ ಸಿಕ್ಕವರನ್ನು ಕೊಲ್ಲುತ್ತ ಹೊರಟಿತ್ತು. ಅದರ ಸಿಡಿಲು ಗರ್ಜನೆಯನ್ನು ಕೇಳುತ್ತಲೇ ಎಷ್ಟೋ ಜನರ ಎದೆಯೊಡೆದು ನೀರಾಗುತ್ತಿತ್ತು. ಜನರು, ದಾರಿಸಿಕ್ಕತ್ತ ಓಡತೊಡಗಿದರು.

ಆಗ ಬುದ್ಧರಕ್ಷಿತೆ ಓಡುತ್ತ ಓಡುತ್ತ ಕಾಮಂದರೆಯ ಹತ್ತಿರ ಬಂದಳು— ಭಗವತಿ, ಘಾತವಾಯಿತು, ಘಾತವಾಯಿತು! ನಂದನ ಸರದಾರನ ತಂಗಿ ಮದಯಂತಿಕೆ ದಾಸಿಯೊಡನೆ ಶಿವದೇವಾಲಯಕ್ಕೆ ಬರುತ್ತಿದ್ದಳು. ಹುಲಿ ಅದೇ ಹಾದಿಯಿಂದ ಹಾರಿ ಬಂದಿತ್ತು. ದಾಸದಾಸಿಯರು ಹೌಹಾರಿ ಎತ್ತಲೋ ಓಡಿದರು. ಈಗ ಮದಯಂತಿಕೆ ಹುಲಿಯ ಹಿಡಿತಕ್ಕೆ ಸಿಕ್ಕಿದ್ದಾಳೆ. ಬೇಗನೆ ಯಾರಾದರೂ ಆಕೆಯನ್ನು ಉಳಿಸಿರಿ, ಕಾಪಾಡಿರಿ! ” ಎಂದು ಒಂದೇ ಉಸಿರಿನಲ್ಲಿ ಹೇಳಿದಳು.

ಈ ಕಟುವಾರ್ತೆಯನ್ನು ಕೇಳಿ ಮಾಲತಿಯ ಎದೆ ನಡುಗಿತು. ಮಾಧವ ಮಾತ್ರ ಒಂದೇ ಹಾರಿಕೆಯಿಂದ ಅವರ ಇದಿರಿಗೆ ನಿಂತ;–'ಬುದ್ಧರಕ್ಷಿತೇ, ಹೇಳು, ಮದಯಂತಿಕೆ ಎಲ್ಲಿದ್ದಾಳೆ? ಬೇಗನೆ ಅಲ್ಲಿಗೆ ಹೋಗುವೆ' ಎಂದು ಆವೇಶದಿಂದ ಕೇಳಿದ.

“ಉಪವನದ ಹೊರಗೆ ದೇವಾಲಯದ ಇದಿರಿನ ರಾಜಮಾರ್ಗದಲ್ಲಿ! ” ಬುದ್ಧಿರಕ್ಷಿತೆ ನಡುಗುತ್ತಲೇ ಹೇಳಿದಳು.

ಮಾಧವ ಬಾಣದ ವೇಗದಿಂದ ಅತ್ತ ಕಡೆಗೆ ಓಡಿಹೋದ. ಕಾಮಂದರೆ ಹೌಹಾರಿ ಅತ್ತ ಕಡೆಗೆ ನೋಡುತ್ತ ನಿಂತಳು.

ಆದರೆ ಅದೇ ಹೊತ್ತಿಗೆ ಮಕರಂದ ಆ ಕ್ರೂರ ಹುಲಿಯ ಬೇಟೆಯಾಡುತ್ತಿದ್ದ. ಅದು ಅವರಿಗೆ ತಿಳಿಯದು. ಮಕರಂದ ಅದೇತಕ್ಕೋ ಊರೊಳಗೆ ಹೋಗಿದ್ದ. ಅಲ್ಲಿ ಅವನೊಂದು ಅಪ್ರಿಯವಾದ ಸುದ್ದಿ

ಯನ್ನು ಕೇಳಿದ: ನಂದನ ಸರದಾರನೊಡನೆ ಭೂರಿವಸುವಿನ ಮಗಳು ಮಾಲತಿಯ ಮದುವೆ ಗೊತ್ತಾಗಿದೆ. ಲಗ್ನದ ಸಿದ್ಧತೆ ಭರದಿಂದ ಸಾಗಿದೆ....! ಮುಂತಾಗಿ.

೭. ಮಕರಂದನ ಮಹಾಸಾಹಸ

ಈ ಅಪ್ರಿಯವಾದ ವಾರ್ತೆ ಮಾಧವನ ಕಿವಿಗೆ ಬಿದ್ದರೆ, ಅವನ ಅವಸ್ಥೆ ಏನಾದೀತು ಎಂಬ ಚಿಂತೆ ಒಂದು ಕಡೆ; ಮತ್ತು ಈ ಅನ್ಯಾಯದ ಮದುವೆ ನಡೆಯದಂತೆ ಹೇಗೆ ತಡೆಯಬೇಕು, ಎಂಬ ವಿಚಾರ ಮತ್ತೊಂದು ಕಡೆ ! ಈ ವಿಚಾರಮಗ್ನತೆಯಲ್ಲಿ ಮಕರಂದ ಓಡೋಡುತ್ತ ಮನೆಗೆ ಹೋದ. ಮಾಧವ ಶಿವದೇವಾಲಯದ ಕಡೆಗೆ ಹೋಗಿರುವುದು ತಿಳಿಯಿತು.

ಮಕರಂದ ಬೇಗ ಬೇಗನೆ ಶಿವಾಲಯದ ಹಾದಿಯನ್ನು ಹಿಡಿದ. ಅಂದು ಅವನಾದರೂ ಆ ಶಿವಲಿಂಗದ ಉತ್ಸವಕ್ಕೆ ಹೋಗಲೇ ಬೇಕಾಗಿತ್ತು. ಮದಯಂತಿಕೆ ಆ ಉತ್ಸವಕ್ಕೆ ಬರತಕ್ಕವಳಿದ್ದಳು. ಇವರಿಬ್ಬರ ಮದುವೆಯನ್ನು ಹೊಂದಿಸಬೇಕೆನ್ನುವುದೂ ಕಾಮಂದಕಿಯ ವಿಚಾರವಿತ್ತು. ಅದಕ್ಕಾಗಿ ಅಲ್ಲಿಗೆ ಬರಬೇಕೆಂದು ಮಕರಂದನಿಗೆ ಮೊದಲೇ ತಿಳಿಸಿದ್ದಳು. ಈಗ ಶಿವದೇವಾಲಯಕ್ಕೆ ಹೋಗಬೇಕು; ಇದರಿಂದ ಒಂದೇ ಕಾಲಕ್ಕೆ ಎರಡು ಉದ್ದೇಶಗಳು ಸಾಧಿಸುತ್ತಿವೆ-ಎಂದು ಅವನು ವಿಚಾರ ಮಾಡಿದ. ಲಗುಬಗೆಯಿಂದ ರಾಜಬೀದಿಯತ್ತ ಸಾಗಿದ.

ಆದರೆ ಮಧ್ಯಮಾರ್ಗದಲ್ಲಿ ಹುಲಿಯ ಗರ್ಜನೆ ಕೇಳತೊಡಗಿತು; ಅದರೊಡನೆ ಯಾರದೋ ಚೀರಾಟವೂ ಕೇಳಿತು. ಯಾರೋ ಸಂಕಟದಲ್ಲಿ ಸಿಕ್ಕಿಕೊಂಡಿದ್ದಾರೆ—ಎಂದು ಅತ್ತ ಕಡೆಗೆ ಧಾವಿಸಿದ.

ಹುಲಿ ಮದಯಂತಿಕೆಯ ಮೈಮೇಲೆ ಹಾರುವ ವರಸೆಯಲ್ಲಿ ನಿಂತಿತ್ತು. ಮಕರಂದ ಓಡಿ ಹೋದವನೇ ಹುಲಿಗೆ ಅಡ್ಡವಾಗಿ ನಿಂತ. ಅದು ಅವನ ಮೈಮೇಲೆಯೇ ಏರಿ ಬಂದಿತು. ತನ್ನ ಹದನವಾದ ಪಂಜರದಿಂದ ಅವನನ್ನು ಹೊಡೆಯಿತು! ಮಕರಂದ ತಡಮಾಡಲಿಲ್ಲ. ಕೈಯಲ್ಲಿಯ

ಕತ್ತಿಯಿಂದ ಹುಲಿಯ ತಲೆಗೆ ಬಲವಾದ ಏಟು ಕೊಟ್ಟ. ಅದು ನೆಲ ನಡುಗುವಂತೆ ಒದರುತ್ತ ಬಿದ್ದುಬಿಟ್ಟಿತು; ಸತ್ತೂಹೋಯಿತು! ಹುಲಿಯ ಹೊಡೆತಕ್ಕೆ ಮಕರಂದನಿಗೂ ಮೂರ್ಛೆ ಬಂದಿತು. ಹಾಗೆಯೇ ನೆಲಕ್ಕೆ ಒರಗಿಬಿಟ್ಟ. ಮದಯಂತಿಕೆ ಅವನ ತಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡಳು; ಶೀತೋಪಚಾರವನ್ನು ಮಾಡತೊಡಗಿದಳು.

ಮಾಧವ ಓಡುತ್ತ ಓಡುತ್ತ ಅಲ್ಲಿಗೆ ಬಂದ. ಹುಲಿಯ ನೆತ್ತರ ನೆಲದ ಮೇಲೆ ಹರಿಯುತ್ತಿತ್ತು. ಆತನ ಗೆಳೆಯನಿಗೆ ಗಾಯವಾಗಿ ಮೈಮರೆತು ಮಲಗಿದ್ದ. ಇದನ್ನೆಲ್ಲ ನೋಡುತ್ತಲೇ ಅವನಿಗೂ ಮೂರ್ಛೆ ಬಂದಂತಾಯಿತು. ತಲೆಯ ಮೇಲೆ ಕೈಹೊತ್ತು ತುಸುಹೊತ್ತು ಸುಮ್ಮನೆ ಕುಳಿತ.

ಕಾಮಂದಕಿ ಮೊದಲಾದವರು ದೂರದಿಂದಲೇ ಇದನ್ನೆಲ್ಲ ನೋಡಿದರು; ತಾವೂ ಲಗುಬಗೆಯಿಂದ ಅಲ್ಲಿಗೆ ಬಂದರು. ಗಾಯಗಳನ್ನು ತೊಳೆದರು. ತಲೆಗೆ ತಣ್ಣೀರಿನ ಪಟ್ಟಿಯನ್ನು ಕಟ್ಟಿದರು; ಸೆರಗಿನಿಂದ ಗಾಳಿಯನ್ನು ಹಾಕತೊಡಗಿದರು.

ತುಸುಹೊತ್ತಿನಲ್ಲಿ ಮಕರಂದನಿಗೆ ಎಚ್ಚರವಾಯಿತು.

“ ಪುಣ್ಯಪುರುಷಾ, ನಿಮ್ಮ ಗೆಳೆಯನಿಗೆ ಅರಿವು ಬಂದಿದೆ. ನೀವೂ ಎಚ್ಚರವಾಗಬೇಕು.” ಮಾಲತಿ, ಮಾಧವನ ಕಿವಿಯಲ್ಲಿ ಹೇಳಿದಳು.

ಮಕರಂದನೂ ಮಾಧವನಿಗೆ ಶೀತೋಪಚಾರ ಮಾಡಿದ; “ಮಾಧವಾ ಎಚ್ಚರನಾಗು,” ಎಂದು ಕೂಗಿ ಕರೆದ. ಮಾಧವ ಮೆಲ್ಲನೆ ಕಣ್ಣು ತೆರೆದ; ಸಾವಕಾಶವಾಗಿ ಎದ್ದು ಕುಳಿತ.

ಅಷ್ಟರಲ್ಲಿ ಮದಯಂತಿಕೆಯ ಆಳು ಅಲ್ಲಿಗೆ ಬಂದು, “ತಾಯಿಯವರೇ, ತಾವು ಬೇಗನೆ ಮನೆಗೆ ಬರಬೇಕು. ಪದ್ಮಾವತೀ ದೊರೆಗಳು ಮಧ್ಯಾಹ್ನದಲ್ಲಿಯೇ ಮನೆಗೆ ಬಂದಿದ್ದರು. ಭೂರಿವಸು ಮಂತ್ರಿಗಳು ಮಾಲತಿಯನ್ನು ನಂದನ ಸರದಾರರಿಗೆ ಕೊಡಲು ಒಪ್ಪಿದ್ದಾರಂತೆ. ಇಂದೇ ಸಂಜೆಗೆ ನಿಶ್ಚಯಕಾರಣ ನಡೆಯಲಿದೆ” ಎಂದು ತ್ವರೆಮಾಡಿದ.

ಮಾಲತೀ-ಮದಯಂತಿಕೆಯರು ಒಂದೇ ಶಾಲೆಯಲ್ಲಿ ಓದಿದವರು. ಇಬ್ಬರೂ ಜೀವದ ಗೆಳತಿಯರು. ಆಳು ಹೇಳಿದ ಸುದ್ದಿಯಿಂದ ಮದಯಂತಿಕೆಗೆ ಬಹಳ ಆನಂದವಾಯಿತು. "ಗೆಳತೀ, ಇನ್ನು ಮೇಲೆ ನೀನು ನನ್ನ ಅತ್ತಿಗೆ ಆಗತಕ್ಕವಳಲ್ಲವೇ ?" ಎಂದು ಉಕ್ಕಿದ ಆನಂದದಲ್ಲಿ ನುಡಿದಳು.

ಮಾಲತೀ-ಮಾಧವರಿಗೆ ಮಾತ್ರ ಈ ಅಪ್ರಿಯವಾರ್ತೆಯಿಂದ ಬಹಳ ಅಸಮಾಧಾನವಾಯಿತು. ಆದರೂ ಅದನ್ನು ಹೊರಗೆ ತೋರಗೊಡಲಿಲ್ಲ.

ಮದಯಂತಿಕೆಯ ಹೃದಯದಲ್ಲಿ ಮಕರಂದನ ಬಗೆಗೆ ಕೃತಜ್ಞತಾ ಭಾವನೆ ಅಚ್ಚೊತ್ತಿತ್ತು; ಅದರೊಡನೆ ಪ್ರೇಮವೂ ಅಂಕುರಿಸಿತು.

"ಬುದ್ಧರಕ್ಷಿತೇ, ನನಗೆ ಜೀವದಾನ ಮಾಡಿದ ಈ ಮಹಾನುಭಾವನನ್ನು ಮತ್ತೆ ನೋಡಬಹುದೇ ?" ಮದಯಂತಿಕೆ ಕಡೆಗಣ್ಣುಗಳಿಂದ ಆತನನ್ನು ನೋಡುತ್ತ ಕೇಳಿದಳು.

"ಭಾಗ್ಯದಲ್ಲಿ ಬರೆದಿದ್ದರೆ ಮತ್ತೆ ನೋಡಬಹುದು, ಕೂಡಬಹುದು." ಬುದ್ಧರಕ್ಷಿತೆ ಸೂಚ್ಯವಾಗಿ ಮಾತಾಡಿದಳು.

ಮದಯಂತಿಕೆ ಬುದ್ಧರಕ್ಷಿತೆಯ ಸಂಗಡ ಹೊರಟುಹೋದಳು. ಮಾಲತೀ-ಮಾಧವರ ಬಾಡಿದ ಮೋರೆಯನ್ನು ನೋಡಿ ಕಾಮಂದಕೆಗೆ ಕೆಡುಕೆನಿಸಿತು.

"ಮಾಧವಾ, ಅಮಾತ್ಯ ಭೂರಿವಸು ಸ್ವಸಂತೋಷದಿಂದ ನಂದನನಿಗೆ ಮಗಳನ್ನು ಕೊಡುತ್ತಿಲ್ಲ. ಅರಸನ ಒತ್ತಾಯಕ್ಕೆ ಒಳಗಾಗಿದ್ದಾನೆ. ಮಾತಿನಲ್ಲಿ ಕೂಡ 'ಮಹಾರಾಜರಿಗೆ ತಮ್ಮ ಮಗಳ ಮೇಲೆ ಸಂಪೂರ್ಣ ಅಧಿಕಾರವಿದೆ' ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಉತ್ತರ ಕೊಟ್ಟಿದ್ದಾನೆ."

ಕಾಮಂದಕೆಯ ಮಾತು ನಡೆದಾಗಲೇ ಲವಂಗಿಕೆ ಕೇಳಿದಳು– "ಇದರಲ್ಲಿ ಮಂತ್ರಿಗಳು ಒಪ್ಪಿಗೆಯನ್ನು ಕೊಟ್ಟಂತೆ ಆಗಲಿಲ್ಲವೇ

ಭಗವತೀ?"

"ಇಲ್ಲ, ಇಲ್ಲ; ನಿಮ್ಮ ಮಗಳನ್ನು ಬೇಕಾದರೆ ನೀವು ಮನಸ್ಸು ಬಂದವರಿಗೆ ಕೊಡಬಹುದು; ಹೆರವರ ಮಗಳ ಮೇಲೆ ನಿಮ್ಮ ಅಧಿಕಾರ ವಿಲ್ಲ, ಎಂದು ಪರ್ಯಾಯದಿಂದ ಹೇಳಿದಂತಾಗಿದೆ. ಆದರೂ ಬಹಿರಂಗ ವಾಗಿ ಅಧಿಕಾರ ಇಚ್ಛೆಯನ್ನು ಅಲ್ಲಗಳೆಯುವ ಧೈರ್ಯವಿಲ್ಲ ಭೂರಿವಸು ವಿಗೆ. ಹಾಗೆಂದು, ನಾವು ರಚಿಸುವ ಕಾರಸ್ಥಾನಕ್ಕೆ ಅಡ್ಡಬರುವ ಇಚ್ಛೆಯೂ ಆತನಿಗಿಲ್ಲ. ಮಾಲತೀ-ಮಾಧವರೇ, ನೀವು ಧೈರ್ಯವಾಗಿರಬೇಕು; ನಿಮ್ಮ ಪ್ರೇಮವನ್ನು ಅಚಲವಾಗಿ ಇಟ್ಟಿರಬೇಕು. ನಾನು ನನ್ನ ಪ್ರಾಣಗಳನ್ನು ಕೂಡ ಪಣಕ್ಕೆ ಹಚ್ಚಿ ನಿಮ್ಮ ಮದುವೆಯನ್ನು ಮಾಡಿಯೇ ತೀರುತ್ತೇನೆ." ಕಾಮಂದಕಿ ಎತ್ತರ ದನಿಯಲ್ಲಿ ಪ್ರತಿಜ್ಞೆ ಮಾಡಿದಳು.

ಆ ಹೊತ್ತಿಗೆ ಭೂರಿವಸುವಿನ ಸೇವಕ ಕಾಮಂದಕಿಯನ್ನೂ ಮಾಲತಿ ಯನ್ನು ಕರೆಯಲು ಬಂದ. ಕಾಮಂದಕಿ ತತ್‌ಕ್ಷಣದಲ್ಲಿಯೇ ಅದನ್ನು ಪ್ರತಿಭಟಿಸಲಿಲ್ಲ. ಸುಳಿ ನೋಡಿ ಏಟು ಹಾಕುವ ಜಾಣತನ ಅವಳದು. ಮಾಲತಿಯನ್ನು ಮುಂದೆ ಮಾಡಿಕೊಂಡು ಸೇವಕನೊಡನೆ ಹೊರಟಳು. ಮಾಲತೀ-ಮಾಧವರ ಮೋರೆಯ ಮೇಲೆ, 'ಇನ್ನು ನಾವು ಒಬ್ಬರನ್ನೊ ಬ್ಬರು ನೋಡಬಹುದೇ?' ಎಂಬ ನಿರಾಶೆಯ ನೆರಳು ನಿಚ್ಚಳವಾಗಿ ಮೂಡಿತ್ತು.

ಗೆಳೆಯನ ನಿರಾಶೆ ಮಕರಂದನ ಮೇಲೂ ಪರಿಣಾಮ ಮಾಡಿತು. ಅವನು ಕಾಮಂದಕಿಯ ಚಾಣಾಕ್ಷತನದ ಮೇಲೆ ಪೂರಾ ನಂಬಿಗೆಯನ್ನು ಇಟ್ಟಿದ್ದ. ನಂದನನ ವಯಸ್ಸು ನಾಲ್ವತ್ತರ ಮನೆಯಲ್ಲಿತ್ತು. ಅಷ್ಟೊಂದು ಶೂರನಲ್ಲ. ರಾಜನ ಹತ್ತಿರ ವಿದೂಷಕತನವನ್ನು ಮಾಡಿ ಆತನ ಪ್ರೀತಿ ಯನ್ನು ಸಂಪಾದಿಸಿಕೊಂಡಿದ್ದ; ಸಂಪತ್ತನ್ನು ಗಳಿಸಿಕೊಂಡಿದ್ದ. ಏನಿ ದ್ದರೂ ಮಾಲತಿಗೆ ಯಾವ ರೀತಿಯಿಂದಲೂ ಅವನು ತಕ್ಕ ವರನಾಗಿರ ಲಿಲ್ಲ. ಮಾಲತಿ ಕಾಮಂದಕಿಗೆ ಪ್ರಾಣಕ್ಕಿಂತ ಪ್ರಿಯಳಾಗಿದ್ದಳು. ಇಂತಹ ಮಮತೆಯ ಮಗುವನ್ನು ಅಯೋಗ್ಯ ನಂದನನ ಕೈಯಲ್ಲಿ

ಕಾಮಂದರೆ ಕೊಡಬಹುದೇ? ಒಂದು ವೇಳೆ ಕೊಡದಿದ್ದರೆ ಭೂರಿವಸು ಮತ್ತು ನಂದನರಲ್ಲಿ ವಿರಸ ತಲೆ ಎತ್ತುವದು. ಅದನ್ನು ತಪ್ಪಿಸಲು ನಂದನನ ತಂಗಿ ಮದಯಂತಿಕೆ ಮತ್ತು ಮಾಧವನ ಮಿತ್ರ ಮಕರಂದ ಇವರ ಮದುವೆ ಮಾಡುವುದೂ ಕಾಮಂದರೆಯ ಹಂಚಿಕೆಯಲ್ಲಿ ಒಂದಾಗಿತ್ತು. ಹುಲಿಯ ಹಿಡಿತದೊಳಗಿಂದ ಮಕರಂದ ಮದಯಂತಿಕೆಯನ್ನು ಪಾರು ಮಾಡಿದ್ದ. ಆ ಪ್ರಸಂಗದಲ್ಲಿ ಅವನು ತನ್ನ ಪ್ರಾಣಗಳ ಪರವೆಯನ್ನು ಮಾಡಿರಲಿಲ್ಲ. ಈ ಪ್ರಸಂಗದಿಂದ ಅವರಿಬ್ಬರಲ್ಲಿ ನಿರ್ಮಲಪ್ರೇಮ ಬೆಳೆದು ಬಂದಿತ್ತು. ಇದು ಕಾಮಂದರೆಯ ಹಂಚಿಕೆಯ ಬಳ್ಳಿಗೆ ಕುಡಿಯೊಡೆದಂತಾಗಿತ್ತು.... ಈ ವಿಚಾರಗಳೆಲ್ಲ ಮಕರಂದನಿಗೆ ಮಾಲತೀ ಮಾಧವರ ವಿವಾಹದ ಬಗೆಗೆ ಅಭಯವನ್ನು ಕೊಡುತ್ತಿದ್ದುವು. ಆ ಧೈರ್ಯದಿಂದ ಹೇಳಿದ—

" ಮಾಧವಾ, ಭಗವತಿ, ಕಾಮಂದರೆ ನಿಮ್ಮ ವಿವಾಹದ ಹೊಣೆಯನ್ನು ಹೊತ್ತಿರುವವರೆಗೆ ನೀನೇನೂ ನಿರಾಶನಾಗಬೇಕಾಗಿಲ್ಲ.

ಮಾಧವ ಭವಿಷ್ಯದ ಬಗೆಗೆ ಬಹಳ ಅಧೀರನಾಗಿದ್ದ. ಆದರೆ ಆ ನಿರಾಶೆಯಲ್ಲಿಯೇ ಆಶೆಯ ಕಿರಣವೊಂದನ್ನು ಆತ ಕಂಡಿದ್ದ. ತನ್ನದು ಏನೇ ಆಗಲಿ; ಭಗವತಿಯ ಪ್ರಯತ್ನದಿಂದ ಮಕರಂದ-ಮದಯಂತಿಕೆಯ ವಿವಾಹವಾಗಿಯೇ ತೀರುತ್ತಿದೆ. ಗೆಳೆಯನ ಸಂತೋಷದಲ್ಲಿ ತಾನೂ ಪಾಲುಗಾರನಾಗುವ ಶುಭಸಮಯವನ್ನು ಇದಿರು ನೋಡುತ್ತಿದ್ದ. ಅದನ್ನೇ ಮಾತನಾಡುತ್ತ ಇಬ್ಬರೂ ನದೀಸಂಗಮಕ್ಕೆ ಹೊರಟರು. ಸಂಧ್ಯಾ ಸಮಯದ ಸೃಷ್ಟಿಯ ರಮಣೀಯತೆ ಅವರ ತಳಮಳವನ್ನು ತಣಿಸಿತು. ಕತ್ತಲಾಗುತ್ತಲೇ ಅವರು ನಗರದ ಕಡೆಗೆ ಹೊರಟರು.

೮. ಕಾಪಾಲಿಕನ ಕೊನೆಗಾಲ

ರಾತ್ರಿ ಮೆಲ್ಲಮೆಲ್ಲನೆ ಸರಿಯುತ್ತಿತ್ತು. ಮಕರಂದನಿಗೆ ಹುಲಿಯೊಡನೆ ಹೋರಾಟದಲ್ಲಿ ತುಸು ದಣಿವಾಗಿತ್ತು. ಅವನಿಗೆ ಬೇಗನೆ ನಿದ್ರೆ ಹತ್ತಿತು. ಮಾಧವನಿಗೆ ಮಾತ್ರ ಮಾಲತಿಯ ಚಿಂತೆಯಲ್ಲಿ ಕಣ್ಣಿಗೆ

ಕಣ್ಣು ಹತ್ತಲೊಲ್ಲದು. ಕ್ಷಣಕ್ಷಣಕ್ಕೆ ಅವನಲ್ಲಿ ನಿರಾಶೆ ಮೂಡತೊಡಗಿತು. ವಿಚಾರ ಮಾಡಿದಂತೆಲ್ಲ, ಮಾಲತಿ ತನಗೆ ಸಿಕ್ಕಲಾರಳು, ಎಂದೇ ಎನಿಸುತ್ತಿತ್ತು. ಇದರಿಂದ ಅವನಿಗೆ ಜೀವವೇ ಬೇಡವಾಯಿತು. ಬರಿದೆ ಬದುಕುವುದರಲ್ಲಿ ಯಾವ ಪ್ರಯೋಜನವೂ ಕಾಣಲಿಲ್ಲ. ಇನ್ನು ಈ ದೇಹದಿಂದ ಏನುಪಯೋಗ? ಈಗಲೇ ಸ್ಮಶಾನಕ್ಕೆ ಹೋಗಬೇಕು; ಅಲ್ಲಿ ಖಡ್ಗದಿಂದ ಆತ್ಮಹತ್ಯಮಾಡಿಕೊಳ್ಳಬೇಕು. ಸುಡುಗಾಡಿನ ನಾಯಿ-ನರಿ ಪಿಶಾಚಿಗಳು ತನ್ನ ದೇಹವನ್ನು ತಿಂದು ತೃಪ್ತಿಪಡುತ್ತಿವೆ. ಈ ರೀತಿಯಲ್ಲಿ ತನ್ನ ಶರೀರ ಸಾರ್ಥಕವಾಗಲಿ ಎಂದುಕೊಂಡ.

ಈ ನಿರ್ಣಯದಂತೆ, ಕತ್ತಿಯನ್ನು ತೆಗೆದುಕೊಂಡ; ಆ ಕಗ್ಗತ್ತಲೆಯಲ್ಲಿ ಕಲ್ಲು ಮುಳ್ಳು ತುಳಿಯುತ್ತ ಸುಡುಗಾಡಿನ ದಾರಿಯನ್ನು ಹಿಡಿದ. ಅವನಿಗೆ ಭೂತಪ್ರೇತಗಳ ಅಂಜಿಕೆಯೇ ಇರಲಿಲ್ಲ.

ಪದ್ಮಾವತೀ ನಗರದ ದಕ್ಷಿಣ ಸ್ಮಶಾನ ಬಲು ಭಯಂಕರವಾಗಿತ್ತು. ಅಲ್ಲಿಯ ಭೂತ ಪಿಶಾಚಿಗಳ ಭಯಂಕರತೆಯ ಬಗೆಗೆ ಅನೇಕ ಕಟ್ಟುಕತೆಗಳಿದ್ದುವು. ಅಲ್ಲದೆ ಸ್ಮಶಾನ ಸಮೀಪದಲ್ಲಿಯೇ ಕಾಪಾಲಿಕರ ಹಾಳು ದೇಗುಲವಿತ್ತು.

ಕಾಪಾಲಿಕರು ಎಂದರೆ, ಕಪಾಲವನ್ನೇ–ಎಂದರೆ ಮನುಷ್ಯರ ತಲೆ ಬುರುಡೆಯನ್ನೇ—ಧರ್ಮಚಿನ್ಹವಾಗಿ ಉಳ್ಳ ಒಂದು ಧಾರ್ಮಿಕ ಪಂಥ. ಇವರನ್ನು ಸುಮಾರಾಗಿ ಪುರಾಣಕಾಲದ ರಾಕ್ಷಸರಿಗೆ ಹೋಲಿಸಬಹುದು. ಇವರಿಗೆ ಶಕ್ತಿಯೇ ಇಷ್ಟದೇವತೆ. ಮನುಷ್ಯರನ್ನು ಕೊಲ್ಲುವುದು, ಆ ತಲೆಬುರುಡೆಗಳ ಮಾಲೆಯನ್ನು ದೇವಿಗೆ ಹಾಕುವುದು, ಆಕೆಯಿಂದ ತಮ್ಮ ಇಷ್ಟಸಿದ್ಧಿಗಳನ್ನು ಪಡೆಯುವುದೇ ಈ ಕಾಪಾಲಿಕರ ರೀತಿ-ನೀತಿಗಳು. ಆಕಾಶದಲ್ಲಿ ಹಾರಾಡುವುದು, ಭೂಮಿಯಲ್ಲಿ ಹುಗಿದಿಟ್ಟ ನಿಧಿಗಳನ್ನು ಕಂಡುಹಿಡಿಯುವುದು, ದೂರದೂರದಲ್ಲಿ ನಡೆಯುವ ಘಟನೆಗಳನ್ನು ಕುಳಿತಲ್ಲಿಂದಲೇ ನೋಡುವುದು, ಇದಿರಿಗೆ ಬಂದವರನ್ನು ನೋಟ ಮಾತ್ರದಿಂದಲೇ ವಶಮಾಡಿಕೊಳ್ಳುವುದು....ಇವೇ ಮುಂತಾಗಿ ಅವರ ಇಷ್ಟ

ಸಿದ್ಧಿಗಳಾಗಿದ್ದವು. ಅವರು ಹೆಂಡ-ಕಂಡಗಳನ್ನು ನರಕಪಾಲಗಳಲ್ಲಿಯೇ ಸೇವಿಸುತ್ತಿದ್ದರು.

ಈ ಕತೆ ನಡೆದಕಾಲಕ್ಕೆ **ಅಘೋರಘಂಟ** ಎಂಬ ಕಾಪಾಲಿಕ ಆ ಹಾಳು ದೇಗುಲದಲ್ಲಿ ಇರುತ್ತಿದ್ದ. ಆತನ ಶಿಷ್ಯೆಳ ಹೆಸರು ಕಪಾಲಕುಂಡಲೆ. ಇವರಿಬ್ಬರೂ ಕಾಲಕಾಲಕ್ಕೆ ರಾತ್ರಿ ಊರಲ್ಲಿ ತಿರುಗಾಡುತ್ತಿದ್ದರು. ತಾಯ್ತಂದೆಗಳ ಕಣ್ಣು ತಪ್ಪಿಸಿ ಮಕ್ಕಳನ್ನು ತರುತ್ತಿದ್ದರು, ಕೊಂದು ತಿನ್ನುತ್ತಿದ್ದರು. ಆ ರುಂಡಗಳನ್ನು ದೇವಿಗೆ ಧರಿಸುತ್ತಿದ್ದರು.

ಅದೇ ಕೃಷ್ಣ ಚತುರ್ದಶಿಯ ರಾತ್ರಿ ಅಘೋರಘಂಟ ಯಾವುದೋ ಸಿದ್ಧಿಯನ್ನು ಪಡೆಯಬೇಕಾಗಿತ್ತು. ಅದಕ್ಕಾಗಿ ಸುಂದರ ತರುಣಿಯನ್ನು ಎತ್ತಿ ತರುವ ಎತ್ತುಗಡೆಯನ್ನು ನಡೆಸಿದ್ದ. ಪೂಜಾ ಸಾಮುಗ್ರಿಗಳನ್ನು ಸಜ್ಜುಮಾಡುವುದಕ್ಕೆ ಕಪಾಲಕುಂಡಲೆಗೆ ಹೇಳಿದ್ದ. ಗುಡಿಯಲ್ಲಿ ಕಪಾಲ ಕುಂಡಲೆ ಅತ್ತಿಂದಿತ್ತ ಓಡಾಡುತ್ತಿದ್ದಳು. ಮಾಧವನಿಗೆ ಆ ಕಾಡಿಗೆ ರಾತ್ರಿಯಲ್ಲಿ ಅದೆಲ್ಲ ಮಸುಮುಸುಕಾಗಿ ಕಾಣುತ್ತಿತ್ತು. ಆದರೆ ಅವನು ತನ್ನ ಆತ್ಮಹತ್ಯೆಯ ವಿಚಾರವನ್ನು ಮೆಲುಕು ಹಾಕುತ್ತ ಕುಳಿತಿದ್ದ.

ಅಘೋರಘಂಟ ನಡುರಾತ್ರಿಯ ಸುಮಾರಿಗೆ ನಗರದ ಮೇಲೆ ಹಾರಾಡಹತ್ತಿದ. ಎಲ್ಲಿಯಾದರೂ ಸುಂದರ ತರುಣಿ ಸಿಕ್ಕಬಹುದೇನೋ, ಎಂದು ಹುಡುಕುತ್ತಲಿದ್ದ. ಮಾಲತಿ ನಿರಾಶಳಾಗಿ ಬಿಸಿಲು ಮಚ್ಚದ ಮೇಲೆ ಮಲಗಿದ್ದಳು. ಅದೇ ಆಗ ಅವಳಿಗೆ ಜೊಂಪು ಹತ್ತಿತ್ತು.

ಅಘೋರಘಂಟ ಸರ್‍ರನೆ ಹದ್ದಿನಂತೆ ಅವಳ ಮೇಲೆ ಎರಗಿದ; ಅಲಕ್ಕನೆ ಎತ್ತಿಕೊಂಡು ಆಕಾಶಕ್ಕೆ ಜಿಗಿದ. ತಡವಿಲ್ಲದೆಯೇ ಅವಳನ್ನು ಹಾಳುದೇಗುಲದಲ್ಲಿ ಇಳಿಸಿದ. ಕಾರ್ಯ ಕೈಗೂಡಿತೆಂದು ಅಟ್ಟಹಾಸ ಮಾಡಿದ.

ಮಾಲತಿ ಬೆಚ್ಚಿಬಿದ್ದು ಕಣ್ಣು ತೆರೆದಳು. ಅಲ್ಲಿಯ ಅಕರಾಳ ವಿಕರಾಳಗಳನ್ನು ಕಂಡು ಚಿಟ್ಟನೆ ಚೀರಿದಳು.

ಈ ಅಟ್ಟಹಾಸ ಚೀರಾಟಗಳು ಮಾಧವನಿಗೆ ಕೇಳಿಸಿದವು. ಅದೇ

ನೆಂದು ತಿಳಿಯದು. ಅತ್ತ ಕಡೆಗೇ ಕಿವಿಗೊಟ್ಟು ಕುಳಿತ. ಯಾವಳೊ ಹೆಂಗಸು ಆ ಕಾಪಾಲಿಕನ ಕೈಯಲ್ಲಿ ಸಿಕ್ಕಿರಬಹುದೇ, ಎಂಬ ಕಲ್ಪನೆ ಅವನನ್ನು ಕಾಡತೊಡಗಿತು.

ಕಪಾಲಕುಂಡಲೆ ಮಾಲತಿಯ ಹಣೆಗೆಲ್ಲ ರಕ್ತಚಂದನವನ್ನು ಬಳಿದಳು. ಕೊರಳಲ್ಲಿ ಕೆಂಪು ಕಣಗಿಲ ಹೂಮಾಲೆಯನ್ನು ಹಾಕಿದಳು. ಅವಳನ್ನು ಒಯ್ದು ದೇವಿಯ ಇದಿರಿಗೆ ನಿಲ್ಲಿಸಿದಳು.

ಮಾಲತಿಯ ಜೀವ ನೆತ್ತಿಯಿಂದಲೇ ಹಾರುವಂತಾಯಿತು. "ಅಪ್ಪಾ, ಅಪ್ಪಾ, ಓಡಿ ಬನ್ನಿರಿ. ನಾನು ಬಲಿಯಾದ ಮೇಲೆ ನೀವು ಅರಸನ ಮೆಚ್ಚಿಗೆಯನ್ನು ಹೇಗೆ ಸಂಪಾದಿಸುತ್ತೀರಿ. ಬೇಗ ಬನ್ನಿರಿ, ನನ್ನನ್ನು ಬಿಡಿಸಿರಿ" ಎಂದು ಹಂಬಲಿಸಿದಳು, ಚೀರಾಡಿದಳು. "ಭಗವತಿ, ಕಾಮಂದರೆ, ನನ್ನನ್ನು ಈ ವರೆಗೆ ಹೊಟ್ಟೆಯ ಮಗಳಂತೆ ಕಾಪಾಡಿದಿರಿ. ನನ್ನ ಸುಖಕ್ಕಾಗಿ ಏನೆಲ್ಲ ಮಾಡಿದಿರಿ. ಆದೆಲ್ಲಾ ಈಗ ಹಾಳಾಗಿಹೋಗುತ್ತದೆ. ಬನ್ನಿರಿ, ಬನ್ನಿರಿ, ನನ್ನನ್ನು ಬಿಡಿಸಿರಿ."

ಮಾಲತಿಯ ಕರುಣದ ಕೂಗು ಮಾಧವನ ಎದೆಯನ್ನು ಸೀಳಹತ್ತಿತು. ಅವನು ಅಲ್ಲಿಂದ ಎದ್ದ; ತಗ್ಗು ದಿಟ್ಟೆ, ಕಲ್ಲು ಮುಳ್ಳುಗಳೆನ್ನದೆ ಹಾಳು ದೇಗುಲದತ್ತ ಸರಸರ ಸಾಗಹತ್ತಿದ.

ಅಘೋರಘಂಟ ಕರ್ಕಶ ಸ್ವರದಲ್ಲಿ ಮಂತ್ರಗಳನ್ನು ಹೇಳುತ್ತಿದ್ದ. ಅವನ ರಾಕ್ಷಸಾಕಾರವನ್ನು ಕಂಡು ಮಾಲತಿ ಕಣ್ಣು ಮುಚ್ಚಿಕೊಂಡಳು. ಅಷ್ಟರಲ್ಲಿಯೇ ಕತ್ತಿಯನ್ನು ಮಸೆಯುವ ಸಪ್ಪಳು ಕೇಳಿಸಿತು. ಬೆದರಿ ಕಣ್ಣು ತೆರೆದಳು. ಕಾಪಾಲಿಕ ಕೈಯಲ್ಲಿ ಕತ್ತಿಯನ್ನು ತೆಗೆದುಕೊಂಡ; ಅದನ್ನೇ ಎತ್ತಿ ಹಿಡಿದ.

ಕಪಾಲಕುಂಡಲೆ ಮಾಲತಿಗೆ ಹೇಳಿದಳು— ಮಗಳೇ ಇನ್ನೊಂದು ನಿಮಿಷದಲ್ಲಿ ನೀನು ದೇವಿಯ ಸನ್ನಿಧಿಯನ್ನು ಸೇರುತ್ತೀ. ಈಗ ನಿನಗೆ ಅತಿ ಪ್ರೀತಿಯವರ ಹೆಸರನ್ನು ನೆನೆಸಿಕೊಳ್ಳು! ಅವರ ಸಹವಾಸ ನಿನಗೆ ಸ್ವರ್ಗದಲ್ಲಿ ತಪ್ಪದೆ ಸಿಕ್ಕುವುದು!

ತನ್ನ ಪ್ರಿಯಕರನ ಹೆಸರನ್ನು ಹೇಳುವ ಪುಟ್ಟಿಗಾದರೂ ಅವಕಾಶ ಸಿಕ್ಕಿತಲ್ಲ, ಎಂದು ಮಾಲತಿ ಹಿಗ್ಗಿದಳು–ಮಾಧವಾ, ಮಾಧವಾ, ನಾನೀಗ ದೇವಿಗೆ ಬಲಿಯಾಗಿ ನಿನ್ನನ್ನು ಬಿಟ್ಟುಹೋಗುತ್ತಿದ್ದೇನೆ. ಆದರೂ ನನ್ನನ್ನು ಮರೆಯಬೇಡ. ನೀನು ನೆನೆಸುತ್ತಿದ್ದರೆ ನಾನು ಸತ್ತರೂ ಜೀವಂತಳಾಗಿದ್ದಂತೆಯೇ ಎಂದು ತಿಳಿದಿದ್ದೇನೆ. ಬರುತ್ತೇನೆ ಮಾಧವಾ ಮಾಧವಾss!" ಮಾಲತಿ ಕೊನೆಯ ಪ್ರಾರ್ಥನೆಯನ್ನು ಮುಗಿಸಿದಳು, ತಲೆ ತಗ್ಗಿಸಿ ನಿಂತಳು.

ಕಾಪಾಲಿಕ ಕತ್ತಿಯನ್ನು ಒಮ್ಮೆ ಝಳಪಿಸಿದ; ಪುತ್ತಿಷ್ಟು ಮೇಲಿಕ್ಕೆತ್ತಿದ್ದ ಇನ್ನೇನು ? ಕಣ್ಣು ಮುಚ್ಚಿ ಕಣ್ಣು ತೆರೆಯುವದರೊಳಗೇ ಅದು ಮಾಲತಿಯ ಕತ್ತನ್ನು ಕತ್ತರಿಸಿ ಹಾಕುತ್ತಿತ್ತು! ಅಷ್ಟರಲ್ಲಿ ದೇಗುಲದ ಕದ ಧಕ್ ಎಂದು ತೆರೆಯಿತು. 'ಹಾ, ದುರಾತ್ಮಾ ನಿಲ್ಲಿಸು ನಿನ್ನ ಕ್ರೂರ ಕೃತ್ಯವನ್ನು!' ಎನ್ನುತ್ತ ಮಾಧವ ಒಂದೇ ಜಿಗಿತಕ್ಕೆ ಒಳಗೆ ಬಂದ; ಕಾಪಾಲಿಕನ ಕತ್ತಿಯ ಕೈಯನ್ನು ಗಟ್ಟಿಯಾಗಿ ಹಿಡಿದುಬಿಟ್ಟ!

ಮಾಧವಾ, ಪ್ರಿಯ ಮಾಧವಾ, ಎಂದು ಮಾಲತಿ ಮಾಧವನ ಹಿಂದೆ ಹೋಗಿ ನಿಂತಳು ! ಕಾಪಾಲಿಕ ನೆಲ ಬಿರಿಯುವಂತೆ ಕಿರುಚಿ ಮಾಧವನೊಡನೆ ಖಡ್ಗಯುದ್ಧಕ್ಕೆ ನಿಂತ. ಆ ಕಾದಾಟದಲ್ಲಿ ಕತ್ತಿಗಳ ತಾಕಲಾಟದಿಂದ ಕಿಡಿ ಸಿಡಿಯುತ್ತಿದ್ದವು. ಮಾಧವನ ಶೌರ್ಯದ ಪುಂದೆ ಅಘೋರಘಂಟನ ಆಟ ನಡೆಯಲಿಲ್ಲ. ಗಾಯಗೊಂಡು ನೆಲಕ್ಕೆ ಉರುಳಿದ ! ಕೊನೆಯ ಉಸಿರನ್ನೂ ಎಳೆದ! ಗುರು ಸಾಯುತ್ತಲೇ ಕಪಾಲಕುಂಡಲೆ ಆ ಕತ್ತಲಲ್ಲಿ ಎಲ್ಲಿಯೋ ಮರೆಯಾಗಿ ಬಿಟ್ಟಳು!

ಮಾಲತಿ ಪ್ರಾಣಸಂಕಟದಿಂದ ಪಾರಾದಳು. ತನ್ನ ಪ್ರಿಯಕರನ ಕೈಹಿಡಿದುಕೊಂಡು ದೇಗುಲದ ಹೊರಗೆ ಬಂದಳು. 'ಮಾಲತೀ, ನೀನು ಇಲ್ಲಿಗೆ ಹೇಗೆ ಬಂದೆ? ' ಎಂದು ಮಾಧವ ಕೇಳಿದ. ' ನೀವು ಇಲ್ಲಿಗೆ ಹೇಗೆ ಬಂದಿರಿ ?' ಎಂದು ಮಾಲತಿ ಕೇಳಿದಳು. ಅವರಿಬ್ಬರೂ ತಮ್ಮ ತಮ್ಮ ಸುಖ ದುಃಖಗಳನ್ನು ಹೇಳಿಕೊಂಡರು; ಪ್ರೇಮ ನಿರಾಶೆಯಿಂದಲೇ ತಾವಿಬ್ಬರೂ ಈ ಕಷ್ಟನಷ್ಟಗಳಿಗೆ ಒಳಗಾಗಬೇಕಾಯಿತೆಂಬುದನ್ನು ತಿಳಿದುಕೊಂಡರು.

ಅಷ್ಟರಲ್ಲಿ ಹಿಲಾಲು ಬೆಳಕಿನಲ್ಲಿ ಜನರ ಗುಂಪು ಅತ್ತ ಕಡೆಗೆ ಬರುತ್ತಿರುವುದು ಕಂಡುಬಂದಿತು. ಮಾಲತಿ ಕಣ್ಮರೆಯಾದುದನ್ನು ಲವಂಗಿಕೆ ಮನೆಯಾಳಿಗೆಲ್ಲ ತಿಳಿಸಿದಳು. ಎಲ್ಲರೂ ಹೌಹಾರಿ ಎತ್ತೆತ್ತಲೋ ಹುಡುಕಿದರು. ಸಿಕ್ಕಲಿಲ್ಲ. ಇದು ಕಾಪಾಲಿಕರ ಕಾರಸ್ಥಾನವೇ, ಎಂದು ಕಾಮಂದಕಿ ಹೇಳಿದಳು. ಅದೇ ಪ್ರಕಾರ ಅವರೆಲ್ಲ ಒಟ್ಟಾಗಿ ಹಾಳು ದೇಗುಲದತ್ತ ಬರುತ್ತಿದ್ದರು. ನಡುದಾರಿಯಲ್ಲಿಯೇ ಮಾಲತಿಯನ್ನು ಕಂಡು ಸಮಾಧಾನದ ಉಸಿರು ಎಳೆದರು.

ಮಾಧವ, ಮಾಲತಿಯನ್ನು ಆ ಪರಿವಾರದ ವಶಕ್ಕೆ ಒಪ್ಪಿಸಿದ; ತನ್ನ ಮನೆಯ ಹಾದಿಯನ್ನು ಹಿಡಿದ ತನ್ನ ಪ್ರಾಣದಾತನನ್ನು ಯಾರೂ ಮನ್ನಿಸಲಿಲ್ಲವಲ್ಲ ? ಎಂದು ಮಾಲತಿಗೆ ಕೆಡುಕೆನಿಸಿತು. ಆದರೂ ಅದನ್ನು ತೋರಗೊಡಲಿಲ್ಲ. ದಾರಿಯುದ್ದಕ್ಕೂ ದೇಗುಲದಲ್ಲಿ ನಡೆದ ಭಯಂಕರ ಘಟನೆಗಳನ್ನೂ ಮಾಧವನ ಶೌರ್ಯವನ್ನೂ ಬಣ್ಣಿಸುತ್ತಿದ್ದಳು. ಅವರೆಲ್ಲ ಅದನ್ನು ಕೇಳುತ್ತಿದ್ದರು ಅಷ್ಟೇ. ಮಾಧವನ ಶೂರತನದ ಬಗೆಗೆ ಒಂದಾದರೂ ಹೊಗಳಿಕೆಯ ಮೆಚ್ಚುಗೆಯ ಶಬ್ದವನ್ನು ಉಚ್ಚರಿಸಲಿಲ್ಲ.

೯. ಮಾಧವನ ಕೊರಳಿಗೆ ಮದುವೆಯ ಮಾಲೆ

ಹಾಳು ದೇಗುಲದಲ್ಲಿಯ ಘಟನೆಯ ನಂತರ ಮಾಧವನಿಗೆ ಯಾವುದೋ ಆಶೆಯ ಕಿರಣ ಕಾಣುತ್ತಿತ್ತು. ಭೂರಿವಸು ತನ್ನ ಸಂಕಲ್ಪವನ್ನು ಬದಲಿಸಬಹುದು; ಮಾಲತಿಯನ್ನು ತನಗೇ ಕೊಡಬಹುದು ಎಂದು ಸವಿಗನಸಿನ ತಿನಿಸುಗಳನ್ನು ಮೆಲುಕು ಹಾಕುತ್ತಿದ್ದ. ಆದರೆ ಭೂರಿವಸುವಿನ ಮನೆಯಲ್ಲಿ ಎಲ್ಲವೂ ವಿಪರೀತವಾಗಿಯೇ ನಡೆದಿತ್ತು. ಬೇಗನೆ ನಂದನನೊಡನೆ ಮಾಲತಿಯ ಮದುವೆಯನ್ನು ಮಾಡಿಬಿಡಬೇಕು; ಎಂದರೆ ನಡುವಿನ ಕಂಟಕಗಳೆಲ್ಲ ದೂರವಾಗುತ್ತವೆ. ಎಂದು ಭರದಿಂದ ಸಿದ್ಧತೆ ಸಾಗಿತು.

ಮಾಧವನಿಗೆ ತುಂಬಾ ನಿರಾಶೆಯಾಯಿತು. ಕಾಮಂದಕಿ ಮಾತ್ರ

ಆಗೀಗ ಅವನಿಗೆ ಧೈರ್ಯ ಕೊಡುತ್ತಲೇ ಇದ್ದಳು. ಆಕೆ ಮಕರಂದ ಲವಂಗಿಕೆಯರನ್ನು ತನ್ನ ಹೊಂಚಿನಲ್ಲಿ ತೆಗೆದುಕೊಂಡಿದ್ದಳು; ಗುಪ್ತವಾಗಿ ತನ್ನ ಬಲೆಯನ್ನು ಬೀಸುತ್ತಿದ್ದಳು.

ಕೊನೆಗೊಮ್ಮೆ ಮದುವೆಯ ದಿವಸ ಬಂದೇ ಬಿಟ್ಟಿತು. ನಂದನನ ಆನಂದಕ್ಕೆ ಅಳತೆಯೇ ಇರಲಿಲ್ಲ. ಆ ಮನೆತನದ ಪದ್ಧತಿಯಂತೆ ಕುಲ ವಧು ಲಕ್ಷ್ಮೀದೇವಿಯ ದೇವಾಲಯಕ್ಕೆ ಹೋಗಬೇಕು; ಅಲ್ಲಿ ಪೂಜಾ ಪುರಸ್ಕಾರಗಳನ್ನು ನೆರವೇರಿಸಬೇಕು. ಅಲ್ಲಿಯೇ ವಿವಾಹದ ವಸ್ತ್ರ ಅಲಂಕಾರಗಳನ್ನು ಧರಿಸಿಕೊಂಡು ಆನೆಯ ಮೇಲೆ ಮೆರೆಯುತ್ತ ವರನ ಮನೆಗೆ ಬರಬೇಕು. ಬಳಿಕ ವಿಧಿಪೂರ್ವಕವಾಗಿ ಮದುವೆ ನೆರವೇರುವುದು. ಆ ಲಕ್ಷ್ಮೀದೇವಾಲಯ ಊರ ಹೊರಗೆ ಇತ್ತು. ಅದನ್ನು ನಂದನ ಸರದಾರನ ಕುಲದವರೇ ಕಟ್ಟಿಸಿದ್ದರು. ಅಲ್ಲಿ ಬೇರೆಯವರಿಗೆ ಪ್ರವೇಶವಿರಲಿಲ್ಲ. ವಧುವಿನ ಮೆರವಣಿಗೆ ಭೂರಿವಸುವಿನ ಮನೆಯಿಂದ ಹೊರಟಿತು. ಮಾಲತಿ ಮೋರೆಗೆ ತೆರೆ ಹಾಕಿಕೊಂಡು, ಆನೆಯನ್ನು ಏರಿದಳು. ಮುತ್ತೈದೆಯರೂ ಗುರುಹಿರಿಯರೂ ಮೆರವಣಿಗೆಯ ಹಿಂಬದಿಯಲ್ಲಿ ನಡೆದಿದ್ದರು. ದೇವಾಲಯ ಬರುತ್ತಲೇ ಮಾಲತಿ ಕೆಳಗಿಳಿದಳು; ಗೆಳತಿ ಲವಂಗಿಕೆಯೊಡನೆ ಗುಡಿಯನ್ನು ಹೊಕ್ಕಳು. ಆ ಮೊದಲೇ ಕಾಮಂದಕೆ ಅಲ್ಲಿಗೆ ಆಗಮಿಸಿದ್ದಳು.

" ಮಗಳೇ, ದೇವಿಯ ಸನ್ನಿಧಿಯಲ್ಲಿ ಪೂಜೆಯ ಸಾಮಗ್ರಿಗಳನ್ನು ಇಟ್ಟಿದೆ. ಪೂಜೆಯನ್ನು ನೆರವೇರಿಸಿರಿ. ನಾನು ಇಲ್ಲಿಯೇ ಇರುವೆ. ಈಗಲೀಗ ನಂದನ ಸರದಾರ ವಧುವಿಗೆ ವಸ್ತ್ರಾಲಂಕಾರಗಳನ್ನು ಕಳಿಸುತ್ತಾರೆ. ಅವುಗಳನ್ನು ನೋಡಿಕೊಂಡು ನಾನು ಒಳಗೆ ಬರುತ್ತೇನೆ. ಹುಂ, ಬೇಗನೆ ನಡೆಯಿರಿ. ಗೋಧೂಳೀ ಮುಹೂರ್ತ ಸಮೀಪಿಸುತ್ತಿದೆ."

ಕಾಮಂದಕೆಯ ಅಪ್ಪಣೆಯಂತೆ ಮಾಲತಿ ಲವಂಗಿಕೆಯರು ದೇವಿಯ ಸಮೀಪಕ್ಕೆ ಹೋದರು.

ಕಾಮಂದಕೆಯ ಯೋಜನೆ ಈಗ ಒಳ್ಳೆಯ ಹದಕ್ಕೆ ಬಂದಿತ್ತು.

ಆಕೆಯ ಹೇಳಿಕೆಯಂತೆ, ಮಾಧವ, ಮಕರಂದ ಮತ್ತು ಸೇವಕ ಕಲಹಂಸ ಇವರು ಆ ಮೊದಲೇ ಈ ಲಕ್ಷ್ಮೀದೇವಸ್ಥಾನಕ್ಕೆ ಬಂದಿದ್ದರು; ಗರ್ಭ ಗುಡಿಯ ಕತ್ತಲೆಯಲ್ಲಿ ಮರೆಯಾಗಿದ್ದರು. ಈ ಗುಟ್ಟು ಕಾಮಂದಕಿ, ಭೂರಿವಸು, ಅವಲೋಕಿತಾ ಮತ್ತು ಲವಂಗಿಕಾ ಇವರಲ್ಲದೆ ಬೇರೆ ಯಾರಿಗೂ ತಿಳಿದಿರಲಿಲ್ಲ. ಆದುದರಿಂದ ವಿವಾಹ ಪೂರ್ವದ ಎಲ್ಲ ಕಾರ್ಯ ಗಳೂ ಅಡೆತಡೆಯಿಲ್ಲದೆ ಸಾಗಿದ್ದವು.

“ ಗೆಳತೀ ಮಾಲತೀ, ಈ ಮಾಲೆಯನ್ನು ಕೊರಳಲ್ಲಿ ಹಾಕಿಕೋ. ಅರಿಷಿಣ ಕುಂಕುಮಗಳನ್ನು ಹಚ್ಚಿಕೊಂಡು ಸುಮಂಗಲಿಯಾಗು. ದೇವಿಯ ಪೂಜೆಯನ್ನು ನೆರವೇರಿಸು.” ಲವಂಗಿಕೆ ಮಾಲತಿಯನ್ನು ಒತ್ತಾಯ ಪಡಿಸಿದಳು.

“ ಈ ಮಾಲೆಯನ್ನು ತೆಗೆದುಕೊಂಡು ನಾನೇನು ಮಾಡಲಿ ಲವಂಗಿಕೇ ? ” ಮಾಲತಿ ನಿಟ್ಟುಸಿರುಬಿಡುತ್ತ ಹೇಳಿದಳು. “ ಸಾಯುವು ದಕ್ಕೂ ನನಗೆ ಸ್ವಾತಂತ್ರ್ಯವಿಲ್ಲವಾಗಿದೆಯಲ್ಲ ! ”

“ ಅಮಂಗಳ ಅಡಗಲಿ ! ಈ ಪೂಜೆಯಿಂದ ನಿನ್ನ ಮದುವೆ ಮಂಗಲಮಯವಾಗುವುದೆಂದು ಭಗವತಿ ಹೇಳಿದ್ದಾಳೆ. ಈ ಸೌಭಾಗ್ಯದ ಅಲಂಕಾರಗಳನ್ನು........”

ಮಾಲತಿ ಮಧ್ಯದಲ್ಲಿಯೇ ಮಾತನಾಡಿದಳು— “ ಎಲ್ಲಿಯ ಸೌಭಾಗ್ಯ ಸಖೀ ! ಮಾಧವನನ್ನು ಅಗಲಿ ದುರ್ಭಾಗ್ಯಳಾದ ನನಗೆ ಸೌಭಾಗ್ಯವಿನ್ನೆಲ್ಲಿ ! ನನ್ನನ್ನು ಮತ್ತೆ ಮತ್ತೆ ಪೀಡಿಸಬೇಡ. ಗೆಳತೀ ಲವಂಗಿಕೇ....”

“ ಮುಂದೆ ಮಾತಾಡಬೇಡ ಮಾಲತೀ. ನಿನ್ನ ನಿರಾಶೆಯ ನುಡಿ ಗಳನ್ನು ಕೇಳಲಾರೆ. ನಿನ್ನ ಬದಲು ನಾನು ದೇವಿಯನ್ನು ಬೇಡಿಕೊಳ್ಳು ತ್ತೇನೆ. ನನ್ನ ಗೆಳತಿಯ ಇಷ್ಟಾರ್ಥವನ್ನು ಪೂರಯಿಸು, ಎಂದು”

ಲವಂಗಿಕೆ ಮಾತನಾಡುತ್ತಿರುವಾಗಲೇ ಮರೆಯಲ್ಲಿದ್ದ ಮಾಧವ ನಿಗೆ ಕಣ್ಣುಸನ್ನೆ ಮಾಡಿದಳು. ಅವನು ಆನಂದದಿಂದ ಮುಂದೆ ಬರಲು

ಸಿದ್ಧನಾಗಿ ನಿಂತ.

"ಗೆಳತೀ, ಆಗದ ಆಸೆಯನ್ನು ಹುಟ್ಟಿಸಬೇಡ. ಈಗ ನನಗಾಗಿ ಒಂದು ಕೆಲಸವನ್ನು ಮಾಡು; ಹೀಗೆಯೇ ಆ ನನ್ನ ಮನದನ್ನ ಮಾಧವನ ಹತ್ತಿರ ಹೋಗು. ಅವನಿಗೆ ನನ್ನ ಕೊನೆಯ ನಮಸ್ಕಾರಪೂರ್ವಕವಾಗಿ ಹೇಳು; ಈ ಹತಭಾಗಿನಿ ಮಾಲತಿಯನ್ನು ನೀವು ಎಂದೂ ಮರೆಯ ಬಾರದು. ಆದರೆ ಅದೇ ನೆನಪಿನ ನಿರಾಶೆಯಿಂದಾಗಿ, ನಿಮ್ಮ ಆತ್ಮನಾಶ ವನ್ನು ಮಾಡಿಕೊಳ್ಳಬಾರದು. ದುಃಖದಿಂದ ತಳಮಳಿಸಬಾರದು...."

ಲವಂಗಿಕೆ ಪ್ರತಿ ಉತ್ತರವನ್ನು ಕೊಡದೆ ಸುಮ್ಮನೆ ನಿಂತಳು. "ಗೆಳತೀ, ನನ್ನ ಮಾತನ್ನು ಮನ್ನಿಸಲಾರೆಯಾ ? ಆ ಪ್ರಿಯತಮನ ಸಮಾಧಾನಕ್ಕಾಗಿ ನೀನಿಷ್ಟು ಮಾಡಲೇಬೇಕು. ಇದೋ ನಿನ್ನ ಕಾಲಿಗೆ ಬೀಳುತ್ತೇನೆ."

ಮಾಲತಿ ನಿಜಕ್ಕೂ ಲವಂಗಿಕೆಯ ಇದಿರಿಗೆ ಸಾಷ್ಟಾಂಗ ನಮಸ್ಕಾರ ಹಾಕಿದಳು. ಲವಂಗಿಕೆ ಮತ್ತೊಮ್ಮೆ ಮಾಧವನಿಗೆ ಕಣ್ಣಸನ್ನೆಮಾಡಿ ತಾನು ಅಲ್ಲಿಂದ ಜಾರಿದಳು. ಅದೇ ಸ್ಥಳದಲ್ಲಿ ಮಾಧವ ಬಂದು ನಿಂತ!

"ಮಾತಾಡುವದಿಲ್ಲವೇ ಸಖೀ" ಮಾಲತಿ ಎದ್ದು ನಿಲ್ಲುತ್ತ ಹೇಳಿ ದಳು. "ಒಳ್ಳೆಯದು. ಅವರೇ ಕೊಟ್ಟ ಈ ಬಕುಲಮಾಲೆಯನ್ನು ನಿನ್ನ ಕೊರಳಲ್ಲಿ ಹಾಕುತ್ತೇನೆ. ಅದನ್ನು ಅವರಿಗೆ ಮುಟ್ಟಿಸು."

ಮಾಲತಿಗೆ ಕಣ್ಣೀರು ತುಂಬಿ ಬಂದಿತ್ತು. ಇದಿರಿಗೆ ಇದ್ದವರು ಯಾರೆಂದು ತಿಳಿಯಲಿಲ್ಲ. ಮಾಧವನ ಕೊರಳಿಗೇ ಬಕುಲಮಾಲೆಯನ್ನು ಹಾಕಿದಳು. ಬಳಿಕ....

"ಪ್ರೀಯ ಸಖೀ, ಇದೇ ನನ್ನ ನಿನ್ನ ಕೊನೆಯ ಆಲಿಂಗನಾ! ಆಹಾಹಾ! ಎಷ್ಟೊಂದು ಸುಖಾಲಿಂಗನ! ಧನ್ಯಳಾದೆ! ಕೊನೆಯದಾಗಿ ನಿನ್ನ ಮುದ್ದು ಮೋರೆಯನ್ನು ಒಮ್ಮೆ ನೋಡುವೆ....!"

ಮಾಲತಿ ಕಣ್ಣೊರೆಸಿಕೊಂಡು ನೋಡಿದಳು! ತನ್ನ ಕಣ್ಣು ಗಳನ್ನು ತಾನೇ ನಂಬಲಿಲ್ಲ. ಮತ್ತೆ ಕಣ್ಣೊರೆಸಿ ನೋಡಿದಳು! ಅಹುದು!

ಅಹುದು! ಅವರೇ, ಅವರೇ, ಮನದನ್ನ ಮಾಧವ! ಲಜ್ಜೆಯಿಂದ ಕೆನ್ನೆ ಕೆಂಪೇರಿದುವು. ಹುಸಿ ಮುನಿಸಿನಿಂದ ಹೇಳಿದಳು—

"ಏನೇ, ಲವಂಗಿಕೇ, ಹೀಗೇಕೆ ಮೋಸ ಮಾಡಿದೆ?"

ಲವಂಗಿಕಾ ಮುಂದಾಗಿ ನುಡಿದಳು— "ಮೋಸ ಮಾಡಲಿಲ್ಲ; ಆಗುವ ಮೋಸವನ್ನು ತಪ್ಪಿಸಿದೆ. ಅಪರಾಧವನ್ನು ಕ್ಷಮಿಸು ದೇವೀ. ಈಗ ಮಾಲೆಯನ್ನು ಹಾಕಿ ವಿವಾಹದ ಸಂಚಕಾರವನ್ನು ಮುಗಿಸಿದಂತಾಗಿದೆ. ಮುಂದೆ ವಿಧಿಪೂರ್ವಕವಾಗಿ ಮದುವೆ ಮಾಡಿಕೊಂಡು ಮಾಧವನ ಮನದನ್ನೆಯಾಗು!"

ಈಗ ಮಾಲತಿಯ ಆನಂದ ನೆಲಮುಗಿಲುಗಳ ಸೀಮೆಯನ್ನು ದಾಟಿತ್ತು. ಆದರೆ, ಹಿರಿಯರ ಒಪ್ಪಿಗೆ ಇಲ್ಲದೆ ಮದುವೆಯಾದೆನಲ್ಲ! ಇದು ತಂದೆಗೆ ತಿಳಿದರೆ ಮುಂದೆ ಆತನ ಗತಿಯೇನು? ತನ್ನ ಗತಿಯೇನು? ಈ ಭೀತಿ ಅವಳನ್ನು ಆವರಿಸಿತು.

ಆ ಹೊತ್ತಿಗೆ ಕಾಮಂದಕಿ ಅಲ್ಲಿಗೆ ಬಂದಳು. ಮಗು, ಈ ಆನಂದ ಸಮಯದಲ್ಲಿ ಮೋರೆ ಬಾಡಿರುವುದೇಕೆ'' ಎಂದು ಕೇಳಿದಳು.

" ಭಗವತಿ, ನಮ್ಮ ಮದುವೆಗೆ ಹಿರಿಯರ ಒಪ್ಪಿಗೆ...."

" ಪಡೆದುಕೊಂಡೇ ಇದನ್ನು ಮಾಡಿರುವೆ. ವತ್ಸಾ ಮಾಧವಾ, ನನ್ನ ಪ್ರೀತಿಯಪುತ್ರಿ ಮಾಲತಿಯ ಕೈಯನ್ನು ನಿನ್ನ ಕೈಯಲ್ಲಿ ಕೊಡುವೆ. ಸ್ವೀಕರಿಸು. ಇವಳನ್ನು ನಿನ್ನ ಜೀವನದ ಅಮೌಲ್ಯ ಆಸ್ತಿಯೆಂದು ಕಾಪಾಡಬೇಕು. ಇಬ್ಬರೂ ಸಮರಸ ಜೀವನದ ಸಾಗರವನ್ನು ಸಾಗಿಸಿ ಶಾಶ್ವತ ಸುಖಕೀರ್ತಿಗಳನ್ನು ಪಡೆಯಿರಿ.''

ಕಾಮಂದಕಿ ಮಾಲತೀ-ಮಾಧವರ ತಾತ್ಕಾಲಿಕ ಪಾಣಿಗ್ರಹಣ ವಿಧಿಯನ್ನು ಮುಗಿಸಿದಳು. ಆ ಕಾಲಕ್ಕೆ ಆವಳ ಮಾತೃಹೃದಯ ಕರಗಿ ಕಣ್ಣೀರಾಗಿ ಹೊರಗೆ ಹರಿಯಿತು ! ಆದರೆ ಅವರು ಭಾವನೆಯ ಮೈಮರೆವಿನಲ್ಲಿ ಕಾಲಕಳೆಯುವಂತೆ ಇರಲಿಲ್ಲ. ಕಾಮಂದಕಿ ಬೇಗನೆ ಸಾವರಿಸಿಕೊಂಡು ಹೇಳಿದಳು—

" ಮಕ್ಕಳೇ, ಆ ದಾರಿಯಿಂದ ನನ್ನ ಆಶ್ರಮಕ್ಕೆ ಹೋಗಿರಿ. ಅಲ್ಲಿ ನಿಮ್ಮ ವಿಧಿಪೂರ್ವಕ ವಿವಾಹದ ಸಿದ್ಧತೆ ಮಾಡಿದೆ. ಮಂಗಲಸಮಯ ದಲ್ಲಿಯೇ ಮದುವೆ ಮುಗಿಯಲಿ"

ಗೋಧೂಳೀ ಮುಹೂರ್ತ ಸಮೀಪಿಸುತ್ತ ಬಂದಿತ್ತು. ನಂದನ ಸರದಾರ ನವವಧುವಿಗೆ ಬೆಲೆಯುಳ್ಳ ಉಡಿಗೆ ತೊಡಿಗೆಗಳನ್ನು ಕಳಿಸಿ ಕೊಟ್ಟಿದ್ದ. ಅವುಗಳಿಂದ ವಧುವನ್ನು ಸಿಂಗರಿಸಲು ಕಾಮಂದಕೆಗೇ ತಿಳಿಸಿದ್ದರು. ಈಗ ನಿಜವಾದ ವಧುವಂತೂ ಮಾಧವನ ಕೈಹಿಡಿದಿದ್ದಳು. ನಂದನನ ಸಲುವಾಗಿ ನವೀನ ವಧುವನ್ನು ನಿರ್ಮಾಣಮಾಡಬೇಕಿತ್ತು ಕಾಮಂದಕೆ. ಆಕೆ ಮಕರಂದನನ್ನು ಕರೆದು ಹೇಳಿದಳು :

" ಮಕರಂದಾ, ಈ ಉಡಿಗೆ ತೊಡಿಗೆಗಳಿಂದ ಬೇಗನೆ ಸ್ತ್ರೀವೇಷ ವನ್ನು ಅಳವಡಿಸಿಕೋ."

ಕಣ್ಣು ಮುಚ್ಚಿ ಕಣ್ಣು ತೆರೆಯುವದರೊಳಗೆ ಮಕರಂದ ಮಾಲತಿ ಯಾಗಿನಿಂತ. ಅವನ ಉಕ್ಕುವ ಚೆಲುವನ್ನು ನೋಡಿ—

" ಈ ಕೃತ್ರಿಮ ಸುಂದರಿ ಮಾಲತಿ ದೊರೆಯಬೇಕಾದರೆ ನಂದನ ಅದೆಷ್ಟು ವರ್ಷ ತಪಸ್ಸನ್ನು ಆಚರಿಸಿದ್ದನೋ! "

ಮಾಧವ ವಿನೋದದಲ್ಲಿ ಮಾತಾಡಿದ. ಆ ಕೂಡಲೆ ಅವನಿ ಗೊಂದು ಭೀತಿ ಕಾಡಿಸಿತು—ನನ್ನ ಮಿತ್ರನಿಗೇನೂ ಅಪಾಯವಿಲ್ಲ ವಷ್ಟೇ, ಭಗವತಿ ?—ಎಂದ.

"ಅದರ ಚಿಂತೆ ನಿನಗೇಕೆ? ಮಾಲತಿಯನ್ನು ಕರೆದುಕೊಂಡು ಮೊದಲು ಈ ದಾರಿಯಿಂದ ಹೋಗಿಬಿಡು"–ಕಾಮಂದಕೆ ಮತ್ತೆ ಆದೇಶವಿತ್ತಳು.

ಮರುಮಾತಿಲ್ಲದೆ ಮಾಲತೀ–ಮಾಧವರು ಆಶ್ರಮಕ್ಕೆ ನಡೆದರು. ನಾಟಕೀ ಮಾಲತಿ–ಮಕರಂದ, ಮೋರೆಯ ಮೇಲೆ ಮುಸುಕನ್ನು ಹಾಕಿ ಕೊಂಡು ಆನೆಯನ್ನು ಏರಿದ. ಲವಂಗಿಕೆ ಆತನ ಬೆನ್ನ ಹಿಂದೆಯೇ ಕುಳಿ ತಳು. ಮೆರೆವಣಿಗೆ ನಂದನ ಸರದಾರನ ಮನೆಗೆ ವಾದ್ಯ- ವೈಭವದೊಡನೆ ಸಾಗಿತು.

೧೦. ಮೋಸದ ಮದುವೆ

ನಾಟಕೀ ಮಾಲತಿಯ ಹತ್ತಿರ ಲವಂಗಿಕಾ ಮತ್ತು ಬುದ್ಧರಕ್ಷಿತ್ರಾ ಇದ್ದೇ ಇದ್ದರು. ತಮ್ಮ ಗೆಳತಿಗೆ-ದೃಷ್ಟಿಯಾಗಿದೆಯೋ ಏನೋ!-ಮೈಯಲ್ಲಿ ಸ್ವಾಸ್ಥ್ಯವಿಲ್ಲ, ಎಂದು ಹಬ್ಬಿಸಿದರು. ಈ ಕಾರಣದಿಂದ ಮಾಲತಿಯನ್ನು ಮಾತನಾಡಿಸಲು ಯಾರೂ ಹೆಚ್ಚಾಗಿ ಮುಂದೆ ಬರಲಿಲ್ಲ. ನಂದನನಿಗಾದರೂ ಇದೇನು ಮೊದಲನೆಯ ಮದುವೆಯಲ್ಲ. ಅವನು ಕೂಡ ಹೆಚ್ಚಾಗಿ ಚಿಕ್ಕಂದವಾಡುವ ಗೊಡವೆಗೆ ಹೋಗಲಿಲ್ಲ. ಯಾವ ತೊಂದರೆಯೂ ಇಲ್ಲದೆ ಮದುವೆ ಮುಗಿದು ಹೋಯಿತು.

ಅದೇ ರಾತ್ರಿ ನಾಟಕೀ ಮಾಲತಿ ಶಯ್ಯಾಗೃಹದಲ್ಲಿ ಮಲಗಿದ್ದ. ಮಾಲತೀ-ಮಾಧವರ ಅನ್ಯೋನ್ಯ ಪ್ರೇಮ ನಂದನನಿಗೆ ತಿಳಿದಿತ್ತು. ತಾನು ವಯಸ್ಸಿನಿಂದ, ರೂಪದಿಂದ ಅವಳಿಗೆ ತಕ್ಕವನಲ್ಲವೆಂದೂ ಅರಿತಿದ್ದ. ಆದಕ್ಕಾಗಿ ಒಮ್ಮೆಲೆ ತನ್ನ ಗಂಡತನದ ಸಾಹಸವನ್ನು ಆರಂಭಿಸಲಿಲ್ಲ. ಸವಿಮಾತುಗಳಿಂದ ಪತ್ನಿಯ ಮನವೊಲಿಸಲು ಮೊದಲು ಮಾಡಿದ.

ಮಕರಂದ ಮುಸುಕು ಹಾಕಿಕೊಂಡಿದ್ದ. ಅದನ್ನು ತೆಗೆಯಲು ಕೈಹಾಕಿದ ನಂದನ ಮಕರಂದ. ಆ ಕೈಯನ್ನು ಕೊಸರಿ ಒಗೆದ; ಮತ್ತೆ ಶಾಲಿನ ಮುಸಕನ್ನು ಎಳೆದುಕೊಂಡ ಮೋರೆಯ ಮೇಲೆ.

“ ಪ್ರಿಯೇ, ತಂದೆಯ ಮನೆಯನ್ನು ಬಿಟ್ಟುಬಂದದ್ದಕ್ಕೆ ಮುನಿಸು ಗೊಂಡಿರುವೆಯಾ ? ನಿನಗೇನು ಕಡಮೆಯಾಗಿದೆ ಈ ಮನೆಯಲ್ಲಿ ? ಒಮ್ಮೆ ಕಣ್ಣು ತೆರೆದು ಸುತ್ತಲೂ ನೋಡು ” ನಂದನ ವಿನಯದಿಂದ ಹೇಳಿಕೊಂಡ; ಆಕೆಯ ಮುಸುಕನ್ನು ತೆರೆಯಲು ಪ್ರಯತ್ನಿಸಿದ.

ಮಕರಂದ ಮತ್ತೆ ಅವನ ಕೈಯನ್ನು ದೂಡಿದ; ಮುಸುಕು ಎಳೆದು ಕೊಂಡು ಮಲಗಿಬಿಟ್ಟ !

ನಂದನನಿಗೆ ನಿರಾಶೆಯಾಯಿತು, ಆದರೂ ಮನವೊಲಿಸುವುದನ್ನು ಮುಂದುವರಿಸಿದ :

" ಪ್ರಿಯೇ, ನನ್ನಿಂದೇನಾದರೂ ತಪ್ಪಾಗಿದ್ದರೆ ಕ್ಷಮಿಸಿಬಿಡು. ಶಾಂತಳಾಗು, ನನ್ನ ಮೇಲೆ ದಯೆದೋರು" ಎಂದು ಕಾಲನ್ನು ಹಿಡಿದು ಕೊಂಡ.

ಮಕರಂದ ಬಲವಾಗಿ ಒದೆದು ಅವನ ಕಿರೀಟವನ್ನೇ ಕೆಡವಿಬಿಟ್ಟ. ಆಗ ಮಾತ್ರ ನಂದನನ ಗಂಡತನ-ಗಂಡುತನಗಳು ಕೆರಳಿದವು.

" ಥೂ, ನೀಚಳೇ ! ಕುಲಟೇ ! ನೀನು ಮಾಧವನ ಪ್ರೇಯಸಿ, ಹುಟ್ಟಾ ವ್ಯಭಿಚಾರಿಣಿ ಎಂಬುದನ್ನು ಬಲ್ಲೆ ! ನಿನ್ನನ್ನು ಇಂದಿನಿಂದಲೇ ತ್ಯಾಗಮಾಡಿದ್ದೇನೆ. ಇನ್ನೆಂದೂ ನಿನ್ನ ಮೋರೆಯನ್ನು ನೋಡುವುದಿಲ್ಲ. ಥೂ, ಥೂ, ಥೂ ! " ಎನ್ನುತ್ತ ಹೊರಗೆ ಹೋಗಿಬಿಟ್ಟ.

ಲವಂಗಿಕೆ ಮೆಲ್ಲನೆ ಒಳಗೆ ಬಂದಳು,– ಇದೇನು ಮಾಡಿಬಿಟ್ಟೆ ಮಕರಂದಾ ! ಹೂವಿನ ಹಾಸಿಗೆಯ ಮೇಲೆ ಮುಳ್ಳು ಹರವಿಬಿಟ್ಟೆ ಯಲ್ಲ!" ಎಂದು ಆಕ್ಷೇಪವೆತ್ತಿದಳು.

" ಬಳ್ಳಿಯಂತೆ ಬಳಕುವ ಮಾಲತಿಯನ್ನು ಆಲಿಂಗಿಸಲು ಬಂದಿ ತ್ತಲ್ಲವೇ ಆ ಹಳೆಯ ಮೋಟುಮರ ! " ಮಕರಂದ ಗಹಗಹಿಸಿ ನಕ್ಕ.

ಅಷ್ಟರಲ್ಲಿ ನೂಪುರಗಳ ದನಿ ಕೇಳಿಸಿತು. ಅವರ ಹಿಂದೆಯೇ " ಮಾಲತಿ, ನನ್ನ ಅಣ್ಣನನ್ನು ಈ ರೀತಿ ಅಪಮಾನಮಾಡಬೇಕೆ ? " ಎಂಬ ಮದಯಂತಿಕೆಯ ದನಿ ಕೇಳಿತು.

" ಮಕರಂದಾ, ಅಣ್ಣನ ಅಪಮಾನದ ಸೇಡನ್ನು ತೀರಿಸಿಕೊಳ್ಳಲು ಮದಯಂತಿಕೆ ತಾನಾಗಿಯೇ ಬರುತ್ತಿದ್ದಾಳೆ. ನೀನು ಬೇಗನೆ ಮುಸುಕು ಹಾಕಿ ಮಲಗಿಕೋ ! " ಲವಂಗಿಕೆ ತಂತ್ರವನ್ನು ಹೂಡಿದಳು.

ಮದಯಂತಿಕೆ, ಮಂದಾರಿಕೆಯರು ಒಳಗೆ ಬಂದರು.

" ಲವಂಗಿಕೇ, ನಿನ್ನ ಪ್ರಿಯಸಖಿ ನಿಜವಾಗಿಯೂ ಮಲಗಿ ದ್ದಾಳೆಯೇ ? " ಮದಯಂತಿಕೆ ಸಿಟ್ಟಿನಿಂದಲೇ ಕೇಳಿದಳು

" ಶ್ಶುಃ, ಶ್ಶುಃ ! ಮೆತ್ತಗೆ ಮಾತನಾಡು. ನಿನ್ನ ಅಣ್ಣನ ಮಾತು ಗಳಿಂದ ಮಾಲತಿ ದುಃಖಿತಳಾಗಿದ್ದಾಳೆ. ಈಗಲೀಗ ಅವಳಿಗೆ ನಿದ್ದೆ

ಹತ್ತಿದೆ ! ” ಲವಂಗಿಕೆ ಅಹುದೇನೋ ಎನ್ನುವಂತೆ ಮಾತನಾಡಿದಳು. “ ತುಸು ಹೊತ್ತಿನಲ್ಲಿ ಎಚ್ಚರವಾದೀತು. ಈ ಮಂಚದ ಮೇಲೆಯೇ ಒಂದು ಬದಿಗೆ ಕುಳಿತುಕೋ.”

ಮದಯಂತಿಕೆ ಮೋರೆಯನ್ನು ಒರೆಸುತ್ತ ಮಂಚದ ಮೇಲೆಯೇ ಕುಳಿತಳು; “ ಈ ಕುಟಿಲ ಸ್ವಭಾವದವಳಿಗೆ ದುಃಖವಾಗಲು ಕಾರಣ ವೇನು ? ” ಎಂದು ಒಗರಿನಿಂದಲೇ ಕೇಳಿದಳು.

“ ನೀನೂ ನಿನ್ನ ಅಣ್ಣನಂತೆಯೇ ಕಠೋರ ಶಬ್ದಗಳನ್ನು ಆಡು ತ್ತಿರುವೆಯಲ್ಲ ! ನವವಧುವಿನ ಮನಸ್ಸನ್ನು ಒಲಿಸಿಕೊಳ್ಳುವ ಕಲೆಯೇ ಗೊತ್ತಿಲ್ಲ ನಿನ್ನ ಅಣ್ಣನಿಗೆ. ದಾಂಡಿಗತನವನ್ನು ಮಾಡಹೋಗುವುದು ರಸಿಕತನದ ಲಕ್ಷಣವಲ್ಲ. ತನಗೆ ಅನುಕೂಲವಾಗಲಿಲ್ಲವೆಂದ ಕೂಡಲೆ ‘ ಮಕರಂದನ ಪ್ರೇಯಸಿ, ಹುಟ್ಟಾ ವ್ಯಭಿಚಾರಿಣಿ....’ ಎಂದು ಬಲ್ಲಂತೆ ಆಡಿಕೊಳ್ಳಬೇಕೇ ? ಇದರಿಂದ ಅವಳಿಗೆ ದುಃಖವಾಗಲಾರದೇ ? ಆಕೆಯ ಪ್ರಿಯಗೆಳತಿಯಾದ ನೀನು ಮಾಲತಿಯ ಮಿದುವೆದೆಯನ್ನು ತಿಳಿದಿಲ್ಲವೇ ?” ಲವಂಗಿಕೆ ತರ್ಕಬದ್ಧವಾಗಿ ನಂದನನನ್ನು ಅಲ್ಲಗಳೆದಳು.

“ ನನ್ನ ಅಣ್ಣ ಹೀಗೆ ಆಡಿದನೇ ? ” ಮದಯಂತಿಕೆ ಮುಂದು ಗಾಣದೆ ಮಾತಾಡಿದಳು. “ ಆದರೆ ” ಮತ್ತೆ ಮಾತನ್ನು ಮುಂದುವರಿಸಿ ದಳು. “ ನನ್ನನ್ನು ಹುಲಿಯ ಬಾಯಿಂದ ಬಿಡಿಸಿದ ಆ ಮಹಾನುಭಾವನ ಜೊತೆಯಲ್ಲಿಯೇ ಮಾಧವನೂ ಮೂರ್ಛೆ ಹೋಗಿದ್ದ. ಮಾಲತಿ ಅವನನ್ನು ತನ್ನ ಪ್ರಾಣಪ್ರಿಯನೆಂಬ ಭಾವನೆಯಿಂದಲೇ ಉಪಚರಿಸಿದಳು. ಇದು ನಂದನನಿಗೆ ತಿಳಿದಿದೆ....”

“ ಹಾಗಾದರೆ, ನೀನೂ ಆ ದಿನ ನಿನ್ನ ಪ್ರಾಣವನ್ನು ಉಳಿಸಿದ ಮಹಾನುಭಾವನ ಉಪಚಾರ ಮಾಡಲಿಲ್ಲವೇ ? ಎಂದಮೇಲೆ ಅವನೂ ನಿನ್ನ ಪ್ರಾಣಪ್ರಿಯನೇ ಏನು ? ” ಲವಂಗಿಕೆ ಮಾತಿನ ಜಾಲದಲ್ಲಿ ಹಿಡಿದಳು.

“ ಹೋಗೇ, ನನಗೆ ಚೇಷ್ಟೆ ಸೇರುವುದಿಲ್ಲ ! ಅದೇನೋ ನನಗೆ

ಗೊತ್ತೇ ಇಲ್ಲ ! " ಹೇಳುತ್ತಿರುವಾಗ ಮದಯಂತಿಕೆಯ ಮೋರೆ ಅರಳಿದ ಗುಲಾಬಿಯಾಗಿತ್ತು.

" ಅದು ಗೊತ್ತಿರದಿದ್ದರೂ ಅವನು ಮರೆತಿರಲಿಕ್ಕಿಲ್ಲ ! " ಲವಂಗಿಕೆ ಮತ್ತೆ ನಗೆಯಾಡಿದಳು.

" ಮದಯಂತಿಕೇ, ಈ ಹುಸಿಮುನಿಸಿನ ಮಾತಿರಲಿ ! ನಿಜವನ್ನು ಹೇಳು. ನಿನ್ನ ಪ್ರಾಣವುಳಿಸಿದ ಆ ಮಹಾನುಭಾವನೇ ಇದಿರಿಗೆ ಬಂದರೆ ಏನು ಮಾಡುವಿ ? " ಬುಂದಾರಿಕೆ ಕೇಳಿದಳು.

" ಆ ಭಾಗ್ಯವನ್ನು ನಾನು ಪಡೆದಿಲ್ಲ. ದೈವಯೋಗದಿಂದ ಆತನೇ ಇದಿರಿಗೆ ಬಂದರೆ ನನ್ನ ಕಣ್ಣುಗಳ ಹಸಿವೆಯನ್ನು ಹಿಂಗಿಸಿಕೊಳ್ಳುವೆ; ಮನಸ್ಸನ್ನು ತೃಪ್ತಿಪಡಿಸುವೆ. ಗೆಳತೀ, ಅವರು ನನ್ನನ್ನು ಸಾವಿನ ದವಡೆ ಯಿಂದ ಬಿಡಿಸಿದ ದಿನವೇ ಈ ದೇಹದ ಧನಿಯಾಗಿದ್ದಾರೆ. ಅವರ ಹೊರತು ಬೇರೆ ಯಾರೂ ನನ್ನ ಕೈಹಿಡಿಯಲಾರರು ! ಆದರೆ ಆ ಭಾಗ್ಯ ನನ್ನ ಹಣೆಯಲ್ಲಿ...." ಕುತ್ತಿಗೆ ಬಿಗಿದು ಮದಯಂತಿಕೆಯ ಮಾತು ನಿಂತವು.

ಅಷ್ಟರಲ್ಲಿ ಎರಡನೆಯ ಪ್ರಹರದ ನಗಾರಿ ಬಾರಿಸಿತು. ಮದಯಂತಿಕೆ ಹೊರಟು ನಿಂತಳು. ಆ ಕೂಡಲೇ ಮಕರಂದ ಮುಸುಕು ತೆಗೆದು ಎದ್ದು ಕುಳಿತು ಮದಯಂತಿಕೆಯ ಕೈಯನ್ನು ಗಟ್ಟಿಯಾಗಿ ಹಿಡಿದ !

ಮಕರಂದನನ್ನು ನೋಡುತ್ತಲೇ ಮದಯಂತಿಕೆಯ ಮೈಕೂದಲು ನಿಮಿರಿದುವು! ತನ್ನ ಕೈಯನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ತನ್ನ ಕೈಯನ್ನು ಆ ಮಹಾನುಭಾವನಲ್ಲದೆ ಬೇರೆ ಯಾರೂ ಹಿಡಿಯಲಾರರು, ಎಂಬ ಮಾತು ಮರುಕ್ಷಣದಲ್ಲಿಯೇ ಸತ್ಯವಾಗಿತ್ತು. ತನ್ನ ಸುದೈವಕ್ಕೆ ಶತಶಃ ಧನ್ಯವಾದಗಳನ್ನು ಕೊಟ್ಟುಕೊಂಡಳು. ಅವಳ ಕಣ್ಣುಗಳಿಂದ ಆನಂದಾಶ್ರುಗಳು ಬಳಬಳ ಸುರಿಯುತ್ತಿದ್ದುವು.

" ಮದಯಂತಿಕೇ, ನಿಮ್ಮಿಬ್ಬರ ಮದುವೆಯ ಸಿದ್ಧತೆಯನ್ನು ಭಗವತಿ ಕಾಮಂದಕಿ ಈ ಮೊದಲೇ ಮಾಡಿಟ್ಟಿದ್ದಾಳೆ. ಅಲ್ಲಿ ಮಾಲತೀ

ಮಾಧವರು ನಿಮ್ಮ ದಾರಿಯನ್ನು ನೋಡುತ್ತಿದ್ದಾರೆ. ನಡೆಯಿರಿ! ಬೇಗ ಬೇಗನೇ ಅಲ್ಲಿಗೆ ಹೋಗೋಣ!" ಲವಂಗಿಕೆ ಹೇಳಿದಳು.

ರಾತ್ರಿ ಬಹಳವಾಗಿತ್ತು. ಪ್ರಹರಿಗಳು ಬೀದಿ ಬೀದಿಗಳಲ್ಲಿ ಗಸ್ತಿ ಕೂಗುತ್ತಿದ್ದರು. ಮಕರಂದ ಪರಿವಾರದೊಡನೆ ಮೆಲ್ಲನೆ ಸಾಗಿದ್ದ. ಗಸ್ತಿಯವರು ಅವರನ್ನು ತಡೆದರು. ಅವರ ಹತ್ತಿರ ನಂದನನು ಕಳಿಸಿದ ಉಡಿಗೆತೊಡಿಗೆಗಳನ್ನು ನೋಡಿದರು. ಆಗಂತೂ ಅವರ ಬಾಯಿ ಕುದುರೆಗೆ ಲಗಾಮು ಇಲ್ಲದಾಯಿತು. ಸಣ್ಣಪುಟ್ಟ ಶಬ್ದಗಳನ್ನು ಬಳಸಿದರು.

ಮಕರಂದನಿಗೆ ತಡೆಯಲಾರದ ಕೋಪ ಬಂದಿತು. ಕಲಹಂಸನೊಡನೆ ಮದಯಂತಿಕೆ, ಲವಂಗಿಕೆ ಮೊದಲಾದವರನ್ನು ಮಾಧವನ ಕಡೆಗೆ ಕಳಿಸಿದ; ತಾನು ಪ್ರಹರಿಗಳ ಸಂಗಡ ಖಡ್ಗಯುದ್ಧಕ್ಕೆ ನಿಂತ.

ಕಾಮಂದಕಿ ಹೇಳಿದ ಸ್ಥಳದಲ್ಲಿ ಮಾಧವ–ಮಾಲತಿಯರು ಕುಳಿತಿದ್ದರು; ಮಕರಂದ ಮದಯಂತಿಕೆಯರ ದಾರಿಯನ್ನು ನೋಡುತ್ತಿದ್ದರು. ಅಷ್ಟರಲ್ಲಿ ಮಕರಂದನ ಕಾದಾಟದ ಸುದ್ದಿ ಮಾಧವನಿಗೆ ಆಶ್ರಮವಾಸಿಗಳಿಂದ ತಿಳಿಯಿತು. ಕೂಡಲೆ ಅವನು ಕತ್ತಿಯನ್ನು ತೆಗೆದುಕೊಂಡ; ಬಾಣದ ಓಟದಿಂದ ಗೆಳೆಯನ ಸಹಾಯಕ್ಕೆ ಧಾವಿಸಿದ.

ಮಕರಂದ ಹತ್ತಿಪ್ಪತ್ತು ಜನ ಪ್ರಹರಿಗಳಿಗೆ ಇದಿರಾಗಿ ಒಬ್ಬನೇ ಹೋರಾಡುತ್ತಿದ್ದ. ಅದೇ ಹೊತ್ತಿಗೆ ಮಾಧವನೂ ಆತನನ್ನು ಕೂಡಿಕೊಂಡ. ಅವರಿಬ್ಬರ ಕಾಳಗದ ಕೌಶಲಕ್ಕೆ ಗಸ್ತಿಗಳು ಕಕ್ಕಾವಿಕ್ಕಿಯಾದರು; ದಾರಿ ಸಿಕ್ಕತ್ತ ಓಡಿಹೋದರು. ಮಹಾರಾಜರು ಮಹಡಿಯ ಮೇಲೆ ನಿಂತಿದ್ದರು; ಈ ತರುಣರ ಸಾಹಸವನ್ನು ನೋಡುತ್ತಿದ್ದರು.

ಕಾಳಗ ಕೊನೆಗಂಡಿತು. ಮಾಧವ ಮಕರಂದರು ವಿಜಯಿಗಳಾಗಿ ಆಶ್ರಮಕ್ಕೆ ಬಂದರು. ಆ ಗೆಲುವಿನ ಸುದ್ದಿಯನ್ನು ಕೇಳಲು ಮಾಲತಿ ಅಲ್ಲಿರಲಿಲ್ಲ. ಆಶ್ರಮದಲ್ಲಿ ಅಲ್ಲಿ ಇಲ್ಲಿ ಎಲ್ಲ ಕಡೆಗೂ ಹುಡುಕಾಡಿದರು. ಎಲ್ಲಿಯೂ ಸಿಕ್ಕಲಿಲ್ಲ. ಪುನಃ ಹಾಹಾಕಾರಕ್ಕೆ ಆರಂಭವಾಯಿತು!

೧೧. ಸೌದಾಮಿನಿಯ ಸಾಹಸ

ಮಾಧವ ಅಘೋರಘಂಟನನ್ನು ಕೊಂದಿದ್ದನಲ್ಲವೇ? ತನ್ನ ಗುರುವಿನ ಕೊಲೆಯ ಸೇಡನ್ನು ತೀರಿಸಿಕೊಳ್ಳಬೇಕೆಂದು ಕಪಾಲಕುಂಡಲೆ ಸಮಯವನ್ನು ಕಾಯುತ್ತಿದ್ದಳು. ಮಾಲತಿ ಎಲ್ಲಿದ್ದಾಳೆ, ಎಂದು ಕಣ್ಣಲ್ಲಿ ಕಣ್ಣಿಟ್ಟು ಹುಡುಕುತ್ತಿದ್ದಳು. ಆ ರಾತ್ರಿ ಮಾಲತಿ ಒಬ್ಬಳೇ ಇದ್ದುದನ್ನು ಕಂಡು ಆಕೆಗೆ ಪರಮಾನಂದವಾಯಿತು. ಕೂಡಲೆ ಆಕೆಯನ್ನು ಎತ್ತಿಕೊಂಡಳು; ಬೆಟ್ಟದ ಕೋಡುಗಲ್ಲಿನ ಮೇಲಿನಿಂದ ಮಾಲತಿಯನ್ನು ಉರುಳಿಸಿ ಕೊಲ್ಲುವ ಹಂಚಿಕೆಯನ್ನು ಹಾಕಿದಳು. "ನೀಚಳೇ, ನಿನ್ನಿಂದಾಗಿ ನನ್ನ ಗುರುವಿನ ಕೊಲೆಯಾಯಿತು. ನೀನು ಇಲ್ಲದಂತಾದರೆ ನಿನ್ನ ಅಗಲಿಕೆಯಿಂದ ಆ ಕೊಲೆಗಾರ ಮಾಧವನೂ ಸತ್ತುಹೋಗುತ್ತಾನೆ. ಆಗಲೇ ನನ್ನ ಗುರುವಿನ ಅತ್ಮಕ್ಕೆ ಶಾಂತಿ ಸಿಕ್ಕುತ್ತದೆ." ಕಪಾಲಕುಂಡಲೆ ಚುಚ್ಚು ಮಾತಾಡುತ್ತ ಮಾಲತಿಯನ್ನು ಬೆಟ್ಟದ ತುದಿಯಲ್ಲಿ ಇಳಿಸಿದಳು; ಅವಳನ್ನು ಕೆಳಗೆ ದೂಡುವ ಮುನ್ನ ಅಟ್ಟಹಾಸ ಮಾಡಿದಳು.

ಆ ವಿಕಟಹಾಸ್ಯ ಬೆಟ್ಟದಲ್ಲಿ ಪ್ರತಿಧ್ವನಿಗೊಂಡಿತು. ಅದೇ ಬೆಟ್ಟದಲ್ಲಿದ್ದ ಯೋಗಿನಿಯೊಬ್ಬಳು ಹೊರಬಂದಳು; ಆ ಕಾಪಾಲಿಕೆಯ ಕ್ರೂರ ಕೃತ್ಯವನ್ನು ನೋಡಿದಳು. ಕೂಡಲೆ ತನ್ನ ಯೋಗಬಲದಿಂದ ಕಪಾಲಕುಂಡಲೆಯನ್ನು ಇದಿರಿಸಿದಳು. ಈ ಸಾತ್ವಿಕ ಶಕ್ತಿಯ ಇದಿರಿಗೆ ದುಷ್ಟಶಕ್ತಿಯ ಆಟ ನಡೆಯಲಿಲ್ಲ. ಕಪಾಲಕುಂಡಲೆಗೆ ಬಹಳ ಅಪಮಾನವೆನಿಸಿತು. ಕೂಡಲೆ ಸಮೀಪದಲ್ಲಿದ್ದ ನದಿಯಲ್ಲಿ ಹಾರಿಕೊಂಡು ಪ್ರಾಣ ಕೊಟ್ಟಳು. ಯೋಗಿನಿ ಮಾಲತಿಯನ್ನು ತನ್ನ ಆಶ್ರಮಕ್ಕೆ ಕರೆದೊಯ್ದಳು.

ಮಾಲತಿಯ ಅಗಲಿಕೆಯಿಂದ ಮಾಧವನಿಗೆ ಹುಚ್ಚು ಹಿಡಿದಂತಾಯಿತು. ಊರಹೊರಗಿನ ಅಡವಿಯಲ್ಲಿ ಮಾಲತೀ ಮಾಲತೀ ಎಂದು ಕೂಗುತ್ತ ತಿರುಗಾಡಹತ್ತಿದ. ಮಾಲತಿ ಎಲ್ಲಿದ್ದಾಳೆ? ಎಂದು ಗಿಡಬಳ್ಳಿಗಳನ್ನು ಕೇಳತೊಡಗಿದ. ಕೊನೆಕೊನೆಗಂತೂ ತಾನು ಆತ್ಮಹತ್ಯೆ

ಯನ್ನು ಮಾಡಿಕೊಳ್ಳಲೇಬೇಕೆಂದು ನಿರ್ಧರಿಸಿದ. ಮಾಧವನ ದುರವಸ್ಥೆ ಯನ್ನು ಕಂಡು ಮಕರಂದನಿಗೂ ಕೆಡುಕೆನಿಸಿತು. ಅವನೂ ಗೆಳೆಯ ನೊಡನೆ ಆತ್ಮಹತ್ಯೆಗೆ ಸಿದ್ಧನಾದ. ಇನ್ನು ಕೊಂಚ ಹೊತ್ತು ತಡೆದಿದ್ದರೆ ಅವರಿಬ್ಬರ ಇಹಲೋಕ ಯಾತ್ರೆ ಮುಗಿದೇಹೋಗುತ್ತಿತ್ತು. ಆದರೆ, ಮಾಲತಿಯ ಜೀವವನ್ನು ಉಳಿಸಿದ ಯೋಗಿನಿ ಅಕಸ್ಮಾತ್ ಅಲ್ಲಿಗೆ ಬಂದಳು; ಅವರ ಮರಣದ ಕಾರಣವನ್ನು ತಿಳಿದುಕೊಂಡಳು. ಮಾಲತಿ ಸುಖರೂಪವಾಗಿ ತನ್ನ ಆಶ್ರಮದಲ್ಲಿ ಸುಖದಿಂದಿರುವುದನ್ನು ಅವರಿಗೆ ಹೇಳಿದಳು. ಮಾಧವ-ಮಕರಂದರು ಮಾಲತಿಯನ್ನು ಕಾಣುವ ಉದ್ದೇಶದಿಂದ ಜೀವ ಹಿಡಿದುಕೊಂಡರು.

ಮಾಲತಿಯ ಅಗಲಿಕೆಯಿಂದ ಭೂರಿವಸು ಮಂತ್ರಿಯ ಅವಸ್ಥೆಯೂ ಹೀಗೆಯೇ ಆಗಿತ್ತು. ಮಗಳ ದುಃಖವನ್ನು ಸಹಿಸಲಾರದೆ ಅವನು ಅಗ್ನಿ ಪ್ರವೇಶದ ಸಿದ್ಧತೆಯನ್ನು ನಡೆಸಿದ್ದ. ಯೋಗಿನಿ ಯೋಗಶಕ್ತಿಯಿಂದ ಈ ದುರಂತವನ್ನು ತಿಳಿದುಕೊಂಡಳು; ಅಲ್ಲಿಯೂ ಹೋಗಿ ಮಂತ್ರಿಗೆ ಮಗಳ ಕ್ಷೇಮವನ್ನು ತಿಳಿಸಿದಳು.

ಕಾಮಂದಕಿ, ಲವಂಗಿಕೆ, ಮದಯಂತಿಕೆಯರಿಗೆ ಮಾಲತಿ ಪಂಚಪ್ರಾಣವಾಗಿದ್ದಳು. ಅವಳು ಕಾಣದಂತಾದುದರಿಂದ ಅವರೆಲ್ಲರಿಗೂ ಜೀವವೇ ಬೇಸರವಾಗಿತ್ತು. ಆ ಮೂವರೂ ಬೆಟ್ಟದ ಮೇಲಿಂದ ಉರುಳಿ ಪ್ರಾಣಬಿಡಲು ಸಿದ್ಧರಾಗಿದ್ದರು; ಆಳವಾದ ದರಿಯ ತುದಿಯಲ್ಲಿ ನಿಂತಿದ್ದರು. ಅಷ್ಟರಲ್ಲಿ ಮಾಧವ, ಮಕರಂದ, ಮಾಲತಿಯರು ಅಲ್ಲಿಗೆ ಧಾವಿಸಿ ಬಂದರು; ಭಗವತಿಗೆ ಪ್ರಣಾಮ ಮಾಡಿದರು. ಮಾಲತಿ, ಗೆಳತಿಯರನ್ನು ಅಪ್ಪಿಕೊಂಡಳು. ಅವರ ಹಿಂದಿದ್ದ ಯೋಗಿನಿ ಮುಂದೆ ಬಂದು ಕಾಮಂದಕಿಯ ಪಾದಗಳನ್ನು ಮುಟ್ಟಿ ನಮಸ್ಕಾರಮಾಡಿದಳು.

“ ಯಾರು ? ಸೌದಾಮಿನಿ ! ಕಾಮಂದಕಿ ಬೆರಗಾಗಿ ನೋಡಹತ್ತಿದಳು; ಹಿಗ್ಗಿ ಹಿರಿದಾಗಿ ಅವಳನ್ನು ಅಪ್ಪಿಕೊಂಡುಬಿಟ್ಟಳು.

“ ಆಹಾ ! ಅಳಿಸಿ ನಗಿಸುವ ದೈವಲೀಲೆ ಬಹಳ ವಿಚಿತ್ರವಾದದ್ದು.

ಸೌದಾಮಿನೀ, ನಿನ್ನಿಂದ ನಮ್ಮೆಲ್ಲರಿಗೆ ಬಹಳ ಉಪಕಾರವಾಗಿದೆ" ಕಾಮಂದರೆ ಆನಂದದ ಕಣ್ಣೀರು ಕರೆಯುತ್ತ ಹೇಳಿದಳು.

"ಭಗವತಿ, ನನ್ನ ಮೇಲೆ ನಿಮ್ಮ ಉಪಕಾರದ ಹೊರೆ ಹೊರಲಾರದಷ್ಟಿತ್ತು. ಅದನ್ನು ಅಲ್ಪಾಂಶದಿಂದ ಮಾತ್ರ ಇಂದು ತೀರಿಸಿದಂತೆ ಆಗಿರಬಹುದು, ಅಷ್ಟೇ!" ಸೌದಾಮಿನಿ ನಮ್ರತೆಯಿಂದ ನುಡಿದಳು.

ಮಾಲತಿ ಸೌದಾಮಿನಿಯ ಯೋಗಶಕ್ತಿಯ ನಲ್ಮೆಯನ್ನು ಬಿಚ್ಚಿದೆಯಿಂದ ಬಣ್ಣಿಸಿದಳು. ಅವಳ ಸಹಾಯವಿಲ್ಲದಿದ್ದರೆ ಕಪಾಲಕುಂಡಲಿ ತನ್ನನ್ನು ಹೇಗೆ ಹೇಗೆ ಚಿತ್ರಹಿಂಸೆಗೆ ಗುರಿಮಾಡುತ್ತಿದ್ದಳು, ಎಂಬುದನ್ನು ಕೇಳುಗರ ಎದೆ ನಡುಗುವಂತೆ ಬಿತ್ತರಿಸಿದಳು.

ಮಾಧವ-ಮಕರಂದರೂ ಭೂರಿವಸುಗಳೂ ತಮತಮಗೆ ಸೌದಾಮಿನಿ ಯೋಗಿನಿಯಿಂದ ಆದ ಉಪಕಾರವನ್ನು ಸ್ಮರಿಸಿದರು.

ಅಷ್ಟರಲ್ಲಿ ಸೌದಾಮಿನಿ ಮಹಾರಾಜರಿಂದ ತಂದ ಪತ್ರವೊಂದನ್ನು ಹೊರತೆಗೆದಳು. ಎಲ್ಲರೂ ಅದನ್ನು ಕುತೂಹಲದಿಂದ ನೋಡಹತ್ತಿದರು. ಕಾಮಂದರೆ ಅವನ್ನು ಓದಿದಳು:

"........ನಿಮ್ಮೆಲ್ಲರಿಗೆ ಕಲ್ಯಾಣವಾಗಲಿ! ಶ್ರೇಷ್ಠ ಕುಲರೂಪ ಗುಣ ಸಂಪನ್ನ ಮಾಧವನೇ, ನಿನ್ನ ಶೌರ್ಯ ಸಾಹಸಗಳನ್ನು ಕಂಡು ನಾವು ಪ್ರಸನ್ನರಾಗಿದ್ದೇವೆ. ಮಾಲತಿಯನ್ನು ಪಡೆದು ನೀನು ಸುಖಿಯಾಗಿ ಬಾಳು. ನಿನ್ನ ಮಿತ್ರ ಮಕರಂದನೂ ನಿನ್ನಂತೆಯೇ ಸಚ್ಚರಿತ್ರನಾಗಿದ್ದಾನೆ. ಆತನಿಗೆ ಮದಯಂತಿಕೆಯನ್ನು ಕೊಡುವುದಾಗಿ ನಿಶ್ಚಯಿಸಿದ್ದೇವೆ........"

"ಮಾಧವ ಮಕರಂದರೇ, ಕೇಳಿದಿರಾ? ಇನ್ನೇನಾಗಬೇಕು?"

"ಕೇಳಿದೆವು ಭಗವತಿ! ನಿಮ್ಮ ಅನುಗ್ರಹದಿಂದ ಕಷ್ಟನಷ್ಟಗಳೆಲ್ಲ ಸುಖದಲ್ಲಿ ಕೊನೆಗಂಡವು." ಮಾಧವ ಮಕರಂದರು ಒಕ್ಕೊರಲಿನಿಂದ ಹೇಳಿದರು.

"ಇದೆಲ್ಲ ಭಗವಂತನ ಅನುಗ್ರಹ. ಸದಾಚಾರಿಗಳಾದ ಭೂರಿ

ವಸು, ದೇವರಾತರು ಮಾಡಿದ ಪ್ರತಿಜ್ಞೆ ಇಂದು ಫಲಿಸಿತು. ಮಕ್ಕಳ ಮದುವೆಯಿಂದಾಗಿ ಅವರ ಸ್ನೇಹ, ಆಪ್ತತ್ವ ರೂಪದಲ್ಲಿ ಮತ್ತಷ್ಟು ಬಲಗೊಂಡಿತು." ಕಾಮಂದಕಿ ಹಳೆಯ ನೆನಹನ್ನು ಮರುಕೊಳಿಸಿದಳು.

"ಭಗವತಿ, ಸತ್ ಸಂಕಲ್ಪವನ್ನು ನೆರವೇರಿಸಲು ಸರ್ವೇಶ್ವರ ಸದಾ ಸಿದ್ಧನೇ ಅಲ್ಲವೇ ?" ಸೌದಾಮಿನಿ ಸಂಕಲ್ಪ ಮತ್ತು ಸಿದ್ಧಿಗಳ ತಾತ್ತ್ವಿಕ ಸಂಬಂಧವನ್ನು ಸೂಚಿಸಿದಳು.

ಶೀಘ್ರದಲ್ಲಿಯೇ ಮಾಲತೀ–ಮಾಧವರ, ಮದಯಂತಿಕಾ–ಮಕರಂದರ ವಿವಾಹಸಮಾರಂಭ ವೈಭವದಿಂದ ನೆರವೇರಿತು. ಸ್ವಯಂ ಮಹಾರಾಜರೇ ಮುಂದಾಗಿ ಮಂಗಲಕಾರ್ಯವನ್ನು ನಡೆಸಿದರು. ದೇವರಾತ, ಭೂರಿವಸು, ಕಾಮಂದಕಿ ಮತ್ತು ಸೌದಾಮಿನಿ ಬಹುಕಾಲದ ಮೇಲೆ ಒಂದೆಡೆಯಲ್ಲಿ ಸೇರಿದ್ದರು. ಅಂದು ಬೀಜರೂಪದಲ್ಲಿದ್ದ ಅವರ ಹಾರಯಿಕೆ, ಇಂದು ಹೆಮ್ಮರವಾಗಿ ಸವಿಹಣ್ಣುಗಳನ್ನು ಕೊಟ್ಟಿತ್ತು !



ಮಕ್ಕಳು ಮತಿವಂತರಾಗಿ ನಾಡಿನ ಕಣ್ಮಣಿಗಳಾಗಬೇಕೆಂದು
ಸಕಲ ತಂದೆ-ತಾಯಿಗಳು ಬಯಸುವರು........?

ಮತಿವಂತರಾಗಲು ಆದರ್ಶ ಸಾಹಿತ್ಯ ಬೇಕಲ್ಲವೇ?

ಆದರ್ಶ

[illegible]

ಭಗವಾನ್ ಬುದ್ಧದೇವ;
ಕವಿ ಸರ್ವಜ್ಞ ಕಥೆ;
[illegible];
ರಾಜಾ ರಾಮಮೋಹನ ರಾಯ್;
ರಾಷ್ಟ್ರಪಿತ ಮಹಾತ್ಮಾ ಗಾಂಧಿ;
ಸ್ವಾಮಿ ವಿವೇಕಾನಂದರು;
ಬಲಶಾಲಿ ಭೀಮಸೇನ;
ಪಂಡಿತ ಈಶ್ವರಚಂದ್ರ ವಿದ್ಯಾಸಾಗರ,
ಸರ್ ಚಂದ್ರಶೇಖರ ವೆಂಕಟರಾಮನ್;
ಪಂಡಿತ ಜವಾಹರಲಾಲ ನೆಹರು;
[illegible];
[illegible];
[illegible];
ಡಾ. [illegible],
ಡಾ. [illegible].
ಗೋಪಾಲಕೃಷ್ಣ ಗೋಖಲೆ;
ಡಾ. ಸರ್ವಪಲ್ಲಿ ರಾಧಾಕೃಷ್ಣನ್;
ಸರ್ ಸಯ್ಯದ್ ಅಹ್ಮದಖಾನ;
[illegible];
[illegible];
ಭಕ್ತ ಪ್ರಹ್ಲಾದ (ಏಕಾಂಕ ನಾಟಕ);
[illegible];

ಶ್ರೀಕೃಷ್ಣ [illegible];
[illegible];
[illegible];
[illegible];
[illegible];
[illegible];
[illegible];
[illegible];
[illegible].
[illegible];
[illegible],
[illegible],
[illegible];
[illegible].
ಶ್ರೀ [illegible],
[illegible];
ಶ್ರೀ [illegible];
[illegible];
[illegible];
[illegible];
[illegible]

(ನಟನ ಮೊದಲ ಪುಸ್ತಕ).